ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 7 29, ಏಪ್ರಿಲ್ 1979 40 ಪೈಸೆ

ಸಂಪಾದಕೀಯ

ಕಾರ್ಯಗತವಾಗದ ಯೋಜನೆಗಳು, ಬಳಸದಿರುವ ನಿಧಿ

ಹಣದ ಅಭಾವದ ಕಾರಣದಿಂದ ಅನೇಕ ಯೋಜನೆಗಳನ್ನು ಮುಂದೂಡುವ ರಾಜ್ಯಸರಕಾರವು, ಬೇರೆಬೇರೆ ಯೋಜನೆಗಳಿಗಾಗಿ ಮಂಜೂರಾದ ನೂರಇಪ್ಪತ್ತೆರಡು ಕೋಟಿ ರೂಪಾಯಿಗಳನ್ನು 1977–78 ನೇ ಇಸವಿಯಲ್ಲಿ ಉಪಯೋಗಿಸದೆ ಹಾಗೆಯೇ ಇಟ್ಟಿದೆಯೆಂದು "ಆಡಿಟರ್ ಮತ್ತು ಕಂಟ್ರೋಲ್ ಜನರಲ್" ಅವರು ವರದಿ ಮಾಡಿದ್ದಾರೆ! ಹಲವು ಯೋಜನೆಗಳಿಗಾಗಿ ಮಂಜೂರಾದ ಹಣವು ಉಪಯೋಗವಾಗಿಯೇ ಇಲ್ಲ. ಇನ್ನು ಹಲವು ಯೋಜನೆಗಳಿಗಾಗಿ ಮಂಜೂರಾದ ಹಣದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಬಳಸಲಾಗಿದೆ. ಉದಾಹರಣೆಗಾಗಿ ನಗರ ಭೂಮಿತಿ ಕಾಯ್ದೆ ಜಾರಿಗಾಗಿ ಎರಡುಕೋಟಿ ರೂಪಾಯಿ, ಮುನ್ಸಿಪಾಲಿಟಿ ಪ್ರದೇಶಗಳಲ್ಲಿ ಕಡಿಮೆ ವೆಚ್ಚದ ಮಾದರಿಮನೆ ಕಟ್ಟುವುದಕ್ಕೆ ಎರಡುಕೋಟಿ ರೂಪಾಯಿ, ನಗರಪ್ರದೇಶಗಳಲ್ಲಿನ ಬಡಜನರಿಗೆ ವಸತಿಗಾಗಿ ಒಂದುಕೋಟಿ ರೂಪಾಯಿ, ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟ ಒದಗಿಸಲು 5.41ಕೋಟಿ ರೂಪಾಯಿ, ಭೂ ಅಭಿವೃದ್ಧಿ ಕೆಲಸಗಳಿಗಾಗಿ 1.19ಕೋಟಿ ರೂಪಾಯಿ–ಇತ್ಯಾದಿಗಳಲ್ಲಿ ಹೆಚ್ಚಿನಂಶ ಉಪಯೋಗವಾಗದೆ ಇದೆ.

ಮಂಜೂರಾದ ಹಣವನ್ನು ಉಪಯೋಗಿಸದೆ ಇರುವುದು ಮತ್ತು ದುರುಪಯೋಗ ಪಡಿಸುವುದರ ಬಗ್ಗೆ ವರದಿಯು ಅನೇಕ ವಿಚಾರಗಳನ್ನು ಬೆಳಕಿಗೆತಂದಿದೆ. ಹಾಸನದಲ್ಲಿ ತೋಟಗಾರಿಕೆ ಇಲಾಖೆಯು ಬೇರೆ ಜಿಲ್ಲೆಗಳಿಗಾಗಿ ಖರೀದಿಸಿದ 27,890ರೂಪಾಯಿ ಬೆಲೆಬಾಳುವ ಬೀಜದ ತೆಂಗಿನಕಾಯಿ ಸಾರಿಗೆ ವ್ಯವಸ್ಥೆ ಇಲ್ಲದೆ ಒಣಗಿ ಹಾಳಾಗಿದೆಯಂತೆ. ಹನ್ನೆರಡು ಜಿಲ್ಲೆಗಳಲ್ಲಿ ಸುಮಾರು ಏಳೂವರೆ ಲಕ್ಷರೂಪಾಯಿ ಬೆಲೆಬಾಳುವ ಬೇರೆ ಬೇರೆ ತಳಿಯ ಬೀಜಗಳು ಒಂದು ವರ್ಷದಿಂದ ಮಾರಾಟವಾಗದೆ ಉಳಿದಿದೆಯಂತೆ. ಆರು ಜಿಲ್ಲೆಗಳಲ್ಲಿ ಕ್ರಿಮಿನಾಶಕ ಕಾರ್ಯಕ್ರಮಕ್ಕಾಗಿ ಸುಮಾರು 68ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಾಗಿದ್ದು, ಇದರಿಂದ ಪ್ರಯೋಜನ ಪಡೆದ ಪ್ರದೇಶ ಮೊದಲಿನ ಅಂದಾಜಿನ 8ಲಕ್ಷ ಹೆಕ್ಟೇರಿಗಿಂತ ಎಷ್ಟೋ ಕಡಿಮೆಯಿದೆ.

ಐದನೇ ಪಂಚವಾರ್ಷಿಕ ಯೋಜನೆಯಲ್ಲಿ 10,984 ಗ್ರಾಮಗಳಿಗೆ ಬೋರ್‌ವೆಲ್ (ನಳಿಗೆಬಾವಿ) ಹಾಕುವ ಯೋಜನೆಯಿದ್ದು ರೂ14.58ಕೋಟಿ ವೆಚ್ಚವಾಗಿರುವುದಾದರೂ ಕೇವಲ 7,472 ಗ್ರಾಮಗಳಲ್ಲಿ ಈ ಕೆಲಸ ನಡೆದಿದೆ. ಇದರಲ್ಲಿ ಬಹಳಷ್ಟುಕಡೆ ಬಾವಿತೋಡಿದ್ದು ಮಾತ್ರ, ಆದರೆ ನಳಿಗೆ ಹಾಕಿ ನೀರಿಗೆ ವ್ಯವಸ್ಥೆಯೇ ಮಾಡಿಲ್ಲ. 1978 ಮೇ ತಿಂಗಳ ಕೊನೆಗಾಗುವಾಗ 5,345 ಕೈಯಿಂದ ನಡೆಸುವ ಪಂಪುಗಳು ಕೆಲಸವೇ ಮಾಡುತ್ತಿಲ್ಲ.

ಸರಕಾರವು ಅನಗತ್ಯವಾಗಿ ಹೆಚ್ಚಿನ ವೆಚ್ಚಮಾಡಿರುವ ವಿಚಾರವನ್ನೂ ವರದಿಯು ಬೆಳಕಿಗೆ ತಂದಿದೆ. ಕುರಿಸಾಕಣೆ ಮತ್ತು ಉಣ್ಣೆ ಉತ್ಪಾದನಾ ಬೆಳವಣಿಗೆಗಾಗಿ 25ಲಕ್ಷರೂಪಾಯಿ ಮಂಜೂರಾಗಿದ್ದು, ಎರಡುವರ್ಷಗಳಿಂದ ಹಾಗೆಯೇ ಉಳಿದಿದೆ. ಇದರ ಸ್ಟಾಫ್ ಸುಮಾರು ಮೂರುವರೆ ಲಕ್ಷರೂಪಾಯಿ ವೆಚ್ಚಮಾಡಿದೆ. ಆದರೆ ಏನೂ ಕೆಲಸ ನಡೆದಿಲ್ಲ. ವರದಿಯು ಹೀಗೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಟ್ಟಿದೆ.

[8ನೇ ಪುಟ ನೋಡಿ]

ಐಕ್ಯ ಹೋರಾಟದ ಫಲ

ಮೈಕೋ ಕಾರ್ಮಿಕರ ಜಯ

ಸುಮಾರು ಏಳುಸಾವಿರ ಕಾರ್ಮಿಕರು ದುಡಿಯುತ್ತಲಿರುವ ಬೆಂಗಳೂರು ನಗರದಲ್ಲಿರುವ ಮೈಕೋ(ಮೋಟಾರ್ ಕಾರ್ಖಾನೆ)ದಲ್ಲಿ ಏಪ್ರಿಲ್ 14ರಂದು ಬೀಗಮುದ್ರೆ (ಲಾಕ್‌ಔಟ್) ಸಾರಲಾಗಿತ್ತು. ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಸಿ. ಐ. ಟಿ. ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಅವರ ಆಯ್ಕೆಯಾಗಿದ್ದು ಮ್ಯಾನೇಜ್‌ಮೆಂಟಿಗೆ ನುಂಗಲಾರದ ತುತ್ತಾಗಿತ್ತು. ಮ್ಯಾನೇಜ್‌ಮೆಂಟ್ ಕೆಲವು ವರ್ಷಗಳಿಂದ ಅನುಸರಿಸಿಕೊಂಡು ಬಂದ ಕಾರ್ಮಿಕ ವಿರೋಧಿ ಕ್ರಮಗಳಿಂದ ಕಾರ್ಮಿಕರಲ್ಲಿ ಅತೃಪ್ತಿ ತುಂಬಿತ್ತು. ಓರ್ವ ಮ್ಯಾನೇಜರ್ ಸಿಂಗ್ ಎಂಬುವರು ಕಾರ್ಮಿಕರನ್ನು ಹೀಯಾಳಿಸಿದ್ದಕ್ಕೆ ಎಲ್ಲಾ ಕಾರ್ಮಿಕರು ಒಗ್ಗಟ್ಟಾಗಿ ಪ್ರತಿಭಟನೆ ಮಾಡಬೇಕಾಯಿತು. ಸಂದರ್ಭ ಕಾಯುತ್ತಿದ್ದ ಮ್ಯಾನೇಜ್‌ಮೆಂಟ್ ಬೀಗಮುದ್ರೆ ಸಾರಿ, ಪೋಲೀಸರನ್ನು ಕರೆಸಿ ಶಾಂತಯುತವಾಗಿ ಪ್ರತಿಭಟಿಸುತ್ತಿದ್ದ ಕಾರ್ಮಿಕರ ಮೇಲೆ ಲಾಠಿಚಾರ್ಜು, ಅಶ್ರುವಾಯು ಪ್ರಯೋಗ ನಡೆಸುವಂತೆ ಮಾಡಿತು. ಏಳುಮಂದಿ ಕಾರ್ಮಿಕರನ್ನು ಕೆಲಸದಿಂದ ಅಮಾನತುಗೊಳಿಸಿತು.

ಬೀಗಮುದ್ರೆ ತೆಗೆಯಬೇಕು, ಅಮಾನತುಗೊಳಿಸಿದ ಕಾರ್ಮಿಕರನ್ನು ನಿಶ್ಶರ್ತವಾಗಿ ಕೆಲಸಕ್ಕೆ ಸೇರಿಸಬೇಕು, ಮ್ಯಾನೇಜರ್ ಸಿಂಗ್ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳನ್ನು ಮಾತುಕತೆಗಳ ಮೂಲಕ ಈಡೇರಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಮೈಕೋ ಕಾರ್ಮಿಕರು ಐಕ್ಯಹೋರಾಟ ನಡೆಸಿದರು. ಕಾಂ. ಸೂರ್ಯನಾರಾಯಣರಾವ್ ಇದಕ್ಕೆ ಮುಂದಾಳುತ್ವವನ್ನಿತ್ತರು. ವಿಧಾನ ಸಭೆಯಲ್ಲಿ ವಿರೋಧ ಪಕ್ಷಗಳ ಮುಂದಾಳುಗಳು ಮತ್ತು ಶಾಸಕರು ಮೈಕೋ ಕಾರ್ಮಿಕರ ಪರವಾಗಿ ಹೋರಾಡಿದರು. ಮೈಕೋ ಕಾರ್ಮಿಕರ ಐಕ್ಯ ಹೋರಾಟಕ್ಕೆ ಎಲ್ಲಾ ಕಾರ್ಮಿಕ ಸಂಘಟನೆಗಳಿಂದಲೂ ಸೌಹಾರ್ದ ಬೆಂಬಲ ದೊರೆಯಿತು. ಹೋರಾಟವನ್ನು ಹತ್ತಿಕ್ಕಲು ಮ್ಯಾನೇಜ್‌ಮೆಂಟ್ ಮತ್ತು ಕೆಲವು ಕಾರ್ಮಿಕ ವಿರೋಧಿ ಗುಂಪುಗಳು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾಯಿತು. ಕೊನೆಗೆ ಸರಕಾರವು ಮಧ್ಯೆ ಪ್ರವೇಶಿಸಿತು.

ಮ್ಯಾನೇಜ್‌ಮೆಂಟ್ ಮ್ಯಾನೇಜರ್ ಸಿಂಗ್ ಕಾರ್ಮಿಕರನ್ನು ನೋವಾಗುವಂತೆ ಹೇಳಿದ್ದಕ್ಕೆ ತನ್ನ ಅಸಂತೋಷವನ್ನು ವ್ಯಕ್ತಪಡಿಸುವ, ಅಮಾನತುಗೊಳಿಸಿರುವ ಕಾರ್ಮಿಕರನ್ನು ನಿಶ್ಶರ್ತವಾಗಿ ಹಿಂತೆಗೆದುಕೊಳ್ಳುವ, ಬೀಗಮುದ್ರೆಯನ್ನು ಎತ್ತುವ, ಕಾರ್ಮಿಕ ಸಂಘವು ಮುಷ್ಕರವನ್ನು ಹಿಂತೆಗೆದುಕೊಳ್ಳುವ ಮತ್ತು ಉಳಿದ ಬೇಡಿಕೆಗಳನ್ನು (ಬೀಗಮುದ್ರೆ ಸಮಯದ ವೇತನಪ್ರಶ್ನೆಯೂ ಸೇರಿ) ಮಾತುಕತೆಯಿಂದ ತೀರಿಸುವ ಸೂಚನೆಗೆ ಕಾರ್ಮಿಕರ ಸರ್ವಸದಸ್ಯರ ಸಭೆ (ಸುಮಾರು 5000 ಮಂದಿ ಹಾಜರಿದ್ದರು) ಯು ಶೇಕಡಾ 99.5ರಷ್ಟು ಬೆಂಬಲವಿತ್ತಿತು. ಕೊನೆಗೆ ಮ್ಯಾನೇಜ್‌ಮೆಂಟ್ ಇದನ್ನು ಒಪ್ಪಬೇಕಾಯಿತು. ಈ ಒಪ್ಪಂದದ ಮೇರೆಗೆ ಏಪ್ರಿಲ್ 27ರಿಂದ ಕಾರ್ಮಿಕರು ಕೆಲಸಕ್ಕೆ ಹಾಜರಾಗುವರು.

ಮೈಕೋ ಕಾರ್ಮಿಕರ ಹೋರಾಟವು ಚಾರಿತ್ರಿಕವಾಗಿದ್ದು, ಐಕ್ಯಹೋರಾಟಕ್ಕೆ ದೊರೆತ ಜಯವು ಇದಾಗಿದೆ.

ಮೇ ದಿನದ ಪ್ರಣಾಳಿಕೆ, ಸಿ. ಐ. ಟಿ. ಯು. 1979

ಶ್ರಮಿಕವರ್ಗದ ಐಕ್ಯತೆಯ ಅಂತಾರಾಷ್ಟ್ರೀಯ ದಿನಾಚರಣೆಯೇ ಮೇ ದಿನ. ಈ ಚಾರಿತ್ರಿಕದಿನದಂದು, ನಾವು ಶ್ರಮಿಕವರ್ಗಕ್ಕೆ. ಸಮಾಜವಾದಿ ರಾಷ್ಟ್ರಗಳ ಜನತೆಗೆ ಅವರ ಮಹತ್ವದ ಸಾಧನೆಗಾಗಿ ನಮ್ಮ ಸೌಹಾರ್ದಯುತ ಶುಭಾಶಯಗಳನ್ನು ನೀಡುತ್ತಿದ್ದೇವೆ...

ರಾಷ್ಟ್ರವಿಮೋಚನೆಗಾಗಿ ಹೋರಾಡುತ್ತಿರುವ, ವರ್ಣದ್ವೇಷದ ವಿರುದ್ಧ ಹೋರಾಡುತ್ತಿರುವ, ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಹೋರಾಡುತ್ತಿರುವ, ಏಷ್ಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಾದ ದೇಶಗಳಿಗೆ ಹಾಗೂ ಆರ್ಥಿಕ ಮುಗಟ್ಟುಗಳನ್ನು ಎದುರಿಸಿ ತಮ್ಮ ಜೀವನ ಮಟ್ಟವನ್ನು ಕಾಯ್ದುಕೊಳ್ಳಲು ಹೋರಾಡುತ್ತಿರುವ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿರುವ ಶ್ರಮಿಕವರ್ಗಕ್ಕೆ ನಮ್ಮ ಸೌಹಾರ್ದಯುತ ಶುಭಾಶಯಗಳು.

ದುಡಿಯುವವರ್ಗದ ಐಕ್ಯತೆಗೆ ತಮ್ಮ ಕಾಣಿಕೆ ಸಲ್ಲಿಸಿರುವ ಎಲ್ಲಾ ಕೇಂದ್ರೀಯ ಕಾರ್ಮಿಕಸಂಘ ಸಂಸ್ಥೆಗಳಿಗೆ ಫೆಡರೇಷನ್ನುಗಳಿಗೆ ಸಿ. ಐ. ಟಿ. ಯು. ವಿನ ಸೌಹಾರ್ದಯುತ ಶುಭಾಶಯಗಳು ಇತ್ತೀಚಿಗೆ ಕೈಗಾರಿಕಾ ಬಾಂಧವ್ಯ ಮಸೂದೆಯನ್ನು ಎಲ್ಲರೂ ಒಗ್ಗೂಡಿ ವಿರೋಧಿಸಿರುವ ರೀತಿ ನಿಜಕ್ಕೂ ಸ್ತುತ್ಯಾರ್ಹವಾದದ್ದು. ಇದನ್ನು ಸಿ.ಐ.ಟಿ.ಯು. ಸ್ವಾಗತಿಸುತ್ತದೆ. ಮುಂದೆಯೂ ಎಲ್ಲಾ ಸಂಘಗಳು ಫೆಡರೇಷನ್ನುಗಳು ಜೊತೆಗೂಡಿ ಕಾರ್ಯನಿರ್ವಹಿಸುತ್ತವೆ ಎಂಬ ನಂಬಿಕೆ ಸಿ.ಐ.ಟಿ.ಯು.ಗಿದೆ. ಹೋರಾಟದಲ್ಲಿ ನಿರತರಾಗಿರುವ ರೈತಬಾಂಧವರಿಗೆ, ಕೃಷಿಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ, ಕೆಲಸಗಾರರಿಗೆ, ಎಲ್ಲ ಯುವಜನತೆ ಮತ್ತು ಸ್ತ್ರೀಯರಿಗೆ ಸಿ. ಐ. ಟಿ. ಯು. ವಿನ ಹಾರ್ದಿಕ ಶುಭಾಶಯಗಳು:

ಜನಸಾಮಾನ್ಯರ ಮತ್ತು ಶ್ರಮಿಕ ವರ್ಗದ ಪರವಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ ಪ. ಬಂಗಾಳ ಮತ್ತು ತ್ರಿಪುರದ ವಾಮಪಂಥೀಯ ಸರಕಾರಗಳಿಗೆ ನಮ್ಮ ಶುಭಹಾರೈಕೆಗಳು.

ಬಂಧುಗಳೇ, ನಮ್ಮ ಜನತೆಯ ಮೂಲ ಸಮಸ್ಯೆಗಳು, ಬಡತನ, ನಿರುದ್ಯೋಗ, ಅಭದ್ರತೆ ಮತ್ತು ಸಾಮಾಜಿಕ ಅನ್ಯಾಯಗಳನ್ನು ಭಾರತದ ಈಗಿರುವ ಆರ್ಥಿಕ ರಚನೆಯಿಂದ ತೊಡೆದುಹಾಕಲು ಸಾಧ್ಯವಿಲ್ಲ ಎಂಬುದು ತುರ್ತುಪರಿಸ್ಥಿತಿಯ ನಂತರದ ನಮ್ಮ ಅನುಭವಗಳಿಂದ ಸ್ಪಷ್ಟವಾಗಿದೆ. ಈ ಎಲ್ಲ ಮೂಲ ಸಮಸ್ಯೆಗಳಿಗೆ ಪರಿಹಾರ ನಮ್ಮ ದೇಶವನ್ನು ಸಮಾಜವಾದಿರಾಷ್ಟ್ರವನ್ನಾಗಿ ಮಾಡುವುದರಲ್ಲಿದೆ.

ನಾವು ಕೃಷಿಕೂಲಿಗಾರರಿಗಾಗಿ ಮತ್ತು ರೈತಾಪಿಜನಗಳಿಗಾಗಿ ಹೋರಾಡಬೇಕಾಗಿದೆ. ಭೂಸುಧಾರಣೆಗಾಗಿ ಮತ್ತು ಭೂಹೀನ ರೈತರಿಗೆ ಉಳಿಕೆಯ ಭೂಮಿಯ ಹಂಚಿಕೆಗಾಗಿ ಒತ್ತಾಯಿಸಬೇಕಾಗಿದೆ. ರೈತಕಾರ್ಮಿಕರ ಐಕ್ಯತೆಗಾಗಿ ನಮ್ಮೆಲ್ಲ ಶಕ್ತಿಯನ್ನು ಒಗ್ಗೂಡಿಸಿ ದುಡಿಯಬೇಕಾಗಿದೆ.

ಬಂಧುಗಳೇ, ಸರ್ವಾಧಿಕಾರದಿಂದ ನಮಗೆ ವಿಮೋಚನೆಸಿಕ್ಕು ಎರಡುವರ್ಷಗಳೇ ಸಂದಿವೆ. ಆದರೆ, ಅದೇ ಸರ್ವಾಧಿಕಾರಿ ಶಕ್ತಿಗಳಿಂದ ನಮ್ಮ ಪ್ರಜಾಪ್ರಭುತ್ವಕ್ಕಿರುವ ಅಪಾಯ ಇನ್ನೂ ಕಡಿಮೆಯಾಗಿಲ್ಲ. ಸಂಜಯ್‌ಗಾಂಧಿ ಮತ್ತೆ ಕಾಣಿಸಿಕೊಳ್ಳುತ್ತಿದ್ದಾರೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ಪ್ರಜಾಪ್ರಭುತ್ವವನ್ನು ತುಳಿದರು, ನಾಗರೀಕ ಹಕ್ಕುಗಳನ್ನು ಕಿತ್ತುಕೊಂಡರು. ಪತ್ರಿಕಾಸ್ವಾತಂತ್ರ್ಯಕ್ಕೆ ಧಕ್ಕೆ ಬಂತು. ನಾವು ಜನತಾ ಪಾರ್ಟಿ ಕಾಂಗ್ರೆಸ್‌ನ ಜೊತೆಗೆ ವಿರೋಧಿಸುವ ಹಾಗೂ ಹೋರಾಡುವ ಪಕ್ಕನ್ನೂ ಕಳೆದು

(8ನೇ ಪುಟ ನೋಡಿ)

ಸಿ. ಐ. ಟಿ. ಯು. 4ನೇ ಸಮ್ಮೇಳನ ಮತ್ತು ನಾನು

ನಾನು ಸಿ. ಐ. ಟಿ. ಯು. ವಿನ ಹಿಂದಿನ ಎಲ್ಲಾ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೆ. ಮದರಾಸಿನಲ್ಲಿ ಏಪ್ರಿಲ್ 11ರಿಂದ 15ರ ವರೆಗೆ ಜರಗಿದ ಸಿ. ಐ. ಟಿ. ಯು. 4ನೇ ಸಮ್ಮೇಳನದಲ್ಲೂ ಭಾಗವಹಿಸಿದೆ. ಯಾವ ವಿಧದಲ್ಲಿ ಈ ಸಮ್ಮೇಳನವು ಇತರ ಎಲ್ಲಾ ಸಮ್ಮೇಳನಗಳಿಗಿಂತ ಅಧಿಕ ಪ್ರಭಾವವನ್ನು ನನ್ನ ಮೇಲೆ ಬೀರಿದೆ ಎಂಬುದರ ಕುರಿತು 'ಅನುಭವ ವಿನಿಮಯ' ಮಾಡಲು ಇಚ್ಛಿಸುತ್ತೇನೆ. ಕಳೆದ 5 ವರ್ಷಗಳ 'ಗಂಭೀರ ಘಟನೆಗಳ' ಹಿನ್ನೆಲೆಯಲ್ಲಿ ನಡೆದ 'ಗಂಭೀರ' ಅಧಿವೇಶನವಷ್ಟೆ.

ಎಷ್ಟೊಂದು ಮಂದಿ ಪ್ರತಿನಿಧಿಗಳು? 9ನೇ ತಾರೀಕು ಸಂಜೆಯಿಂದಲೇ "ನಾವು ಧರ್ಮಪ್ರಕಾಶ ಕಲ್ಯಾಣಮಂಟಪದಲ್ಲಿರುವಾಗ" ದೇಶದ ವಿವಿಧರಾಜ್ಯಗಳಿಂದ ವಿಧವಿಧದ-ಉಡುಪು ತೊಡುಪುಗಳನ್ನು ತೊಟ್ಟು ಸಾಮಾನು ಪೆಟ್ಟಿಗೆಗಳನ್ನು ಹೊತ್ತು ನೂರಾರು, ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದರು. ಎಷ್ಟೊಂದು ಬೆಳೆದಿದೆ ನಮ್ಮ ಸಿ. ಐ. ಟಿ. ಯು. ! ಇಂದಿರಾಗಾಂಧಿ ಮತ್ತವಳ ದುಷ್ಟಕೂಟ ದೇಶದಲ್ಲಿ ಸಿ. ಐ. ಟಿ. ಯು. ವಿನ 'ಇತಿಶ್ರೀ' ಮಾಡಲು ಹೊರಟು 600ಕ್ಕೂ ಅಧಿಕ ಸಿ. ಐ. ಟಿ. ಯು. ಕಾರ್ಯಕರ್ತರನ್ನು 'ಹತ್ಯೆ' ಮಾಡಿದುದನ್ನು ನೆನಪು ಮಾಡಿದರೆ... ಆ ಹುತಾತ್ಮರು ಯಾವ ಉದ್ದೇಶಕ್ಕಾಗಿ ತಮ್ಮ ಜೀವನವನ್ನು ಬಲಿದಾನಗೈದರೋ ಆ ಉದ್ದೇಶ ಸಾಧನೆಗಾಗಿ ಎಷ್ಟೊಂದು ಪಟ್ಟು ಅಧಿಕ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ಆಗಮಿಸಿ 'ತಮ್ಮ ಪ್ರತಿಜ್ಞೆಯನ್ನು ಪುನರುಚ್ಚರಿಸಲು' ಬರುತ್ತಿದ್ದಾರೆ.. ಇದನ್ನು ನೋಡಿ, ಎಣಿಸಿ ನಾನು ಆನಂದ ತುಂದಿಲವಾದೆ...ಸಂತೋಷದಿಂದ ಕುಣಿದಾಡಿದೆ...

ಎಂತಹ ವಿಶಾಲವಾದ ಮಂಟಪದಲ್ಲಿ ಸಿ. ಐ. ಟಿ. ಯು. ಅಧಿವೇಶನ ನಡೆಯುತ್ತಿತ್ತು...ಕಲಾತ್ಮಕವಾಗಿ ರಚಿತವಾದ ಹಲವಾರು ಎಕರೆ ವಿಸ್ತೃತ ಸ್ಥಳದಲ್ಲಿ ಹರಡಿದ ತಂಪಾದ ತೆಂಗಿನ ಸೋಗೆಗಳಿಂದ ಮುಚ್ಚಿದ ಆ ಮಂಟಪ ...ಬಿಸಿಲಿನ ಬೇಗೆಯಿಂದ ಕುದಿಯುತ್ತಿದ್ದ ಮದ್ರಾಸಿನಲ್ಲಿ ಒಂದು ತಂಪಾದ ಆಸರೆ...ಪ್ರತಿನಿಧಿಗಳಿಗೆ...

ಕೆಂಪು ಸಮವಸ್ತ್ರದ ಆ ಸಾವಿರ ಸಾವಿರ ಸ್ವಯಂಸೇವಕರು...ಎಷ್ಟೊಂದು ಶಿಸ್ತು ! ಎಷ್ಟೊಂದು ಆತುರ-ತಮ್ಮ ತಮ್ಮ ನಿರ್ದಿಷ್ಟ ಕೆಲಸಗಳನ್ನು ನಡೆಸಲಿಕ್ಕೆ ! ಎಲ್ಲರ ಗಮನ ಸಮ್ಮೇಳನವನ್ನು ಯಶಸ್ಸುಗೊಳಿಸುವುದಕ್ಕಾಗಿತ್ತು. ಅಧಿವೇಶನದ ಕಾರ್ಯಕಲಾಪಗಳಿಗೆ ಯಾವ ವಿಧದಲ್ಲೂ ಬಾಧಕವುಂಟಾಗಬಾರದು ಅಧಿವೇಶನವು ಸರಾಗವಾಗಿ......

ಸಿ.ಐ.ಟಿ.ಯು. ಮುಂದಾಳುಗಳು... ಬಿ. ಟಿ. ಆರ್, ಪಿ. ರಾಮಮೂರ್ತಿ, ಎಂ. ಕೆ. ಪಾಂಡೆ, ಜ್ಯೋತಿಬಾಸು, ಕೃಷ್ಣಪಾದ ಘೋಷ್, ಮನೋರಂಜನರ್ಾಯ್. ಸಿ. ಕಣ್ಣನ್, ಜೆ. ಭರತನ್, ಪೂಣಾಮಿಯಾ, ಕಮಲಸರ್ಕಾರ್, ಉಮಾನಾಥ, ಚಿಂದನ್, ಬಾಲಾನಂದನ್, ಬಾಲಸುಬ್ರಹ್ಮಣ್ಯಂ...ಉನ್ನತವಾದ ವೇದಿಕೆಯ ಮೇಲೆ ಆಸೀನರಾಗಿ ಅಧಿವೇಶನದ ಉದ್ದಕ್ಕೂ ಪ್ರತಿನಿಧಿಗಳ ಅನುಭವವನ್ನು, ಅಭಿಪ್ರಾಯಗಳನ್ನು ಪಡೆದು, ಸಿ. ಐ. ಟಿ. ಯು. ಅನುಸರಿಸುತ್ತಿರುವ ಧೋರಣೆ, ಲೈನು ಎಷ್ಟು ಸರಿ, ಎಲ್ಲಿ ತಡವುತ್ತಿದೆ...ಎಂಬುದನ್ನು ಚಿಂತಿಸುತ್ತಿದ್ದ ಆ ಭಂಗಿ...15ಲಕ್ಷಕ್ಕೂ ಅಧಿಕ ಸಂಖ್ಯೆಯ ಕಾರ್ಮಿಕ ಸದಸ್ಯರ ಮೂಲಕ ದೇಶದ ಕಾರ್ಮಿಕವರ್ಗವು 'ಮುಂದಳ ಪಾತ್ರ' ವಹಿಸುವಂತೆ ಮಾಡುವ ಜವಾಬ್ದಾರಿ ಹೊತ್ತ ಆ ಮುಂದಾಳುಗಳು...

ಎಷ್ಟೊಂದು ಭಾಷೆಗಳ 'ವೈವಿಧ್ಯ ಮಧ್ಯ ಸ್ವರಗಳು'...ಸ್ವಾಭಾವಿಕ... ದೇಶದ ಎಲ್ಲಾ ರಾಜ್ಯಗಳಿಂದ ಬಂದ ಪ್ರತಿನಿಧಿಗಳು ಮಾತಾಡುವ ಭಾಷೆಗಳು...ವಿವಿಧ...ಜತೆ ತರ್ಜುಮೆ... ಮರುತರ್ಜುಮೆ... ಇದಕ್ಕೆಲ್ಲಾ ಸಮಯ...ಸಮಯ ಕಡಿತ ಮಾಡಬೇಕಾದ ಅವಶ್ಯಕತೆ. ಗಂಭೀರವಾಗಿ ಆಸೀನರಾದ ಸಿ.ಐ.ಟಿ.ಯು. ಅಧ್ಯಕ್ಷರು ಇದನ್ನೆಲ್ಲಾ 'ಸರಿಪಡಿಸಲು' ಮಾಡುತ್ತಿದ್ದ ಪ್ರಯತ್ನ...

ಮಹಿಳಾ ಪ್ರತಿನಿಧಿಗಳ ಪತ್ರ... ಸಿ. ಐ. ಟಿ. ಯು. ಅಧ್ಯಕ್ಷರಿಗೆ... "ರಾಜ್ಯಗಳ ಪ್ರತಿನಿಧಿಗಳು ಸ್ತ್ರೀಯರಿಗೆ ಮಾತಾಡಲು ಅವಕಾಶಕೊಡುತ್ತಿಲ್ಲ... ನೀವು ನಮ್ಮನ್ನು ರಕ್ಷಿಸಬೇಕು....ಅವಕಾಶ ಮಾಡಿಕೊಡಬೇಕು....ಸಮ್ಮೇಳನದಲ್ಲಿ ವಿದ್ಯುಚ್ಛಕ್ತಿ ಸಂಚಾರ...ಅಧ್ಯಕ್ಷರ ಗರ್ಜನೆ...ಒಬ್ಬರ ನಂತರ ಒಬ್ಬರು, ಅಧ್ಯಕ್ಷರು ಕರೆದ ಹಾಗೆ ಬಂದು, ಸುಶೀಲಾಗೋಪಾಲನ್, ಅಹಲ್ಯಾ ರಂಗಣೇಕರ್, ವಿಮಲಾ ರಣದೀವೆ, ಗಂಗಮ್ಮ, ಇತ್ಯಾದಿ ಇತ್ಯಾದಿ, ವೇದಿಕೆಯ ಮೇಲೆ ಬಂದು, 'ಮನಸಾರೆ' ಮಾತಾಡಿದರು...ಸಿ. ಐ. ಟಿ. ಯು. ಸಂಸ್ಥೆ ದುಡಿಯುವ ಮಹಿಳೆಯರ ಸಮ್ಮೇಳನವನ್ನು ನಡೆಸಿ ಸ್ತ್ರೀಯರ ವಿಶಿಷ್ಟ ಬೇಡಿಕೆಗಳತ್ತ ಗಮನ ಹರಿಸಿದುದರ ಕುರಿತು...ಈ ಬೇಡಿಕೆಗಳನ್ನು ಪಡೆಯುವ ಸಿ. ಐ. ಟಿ. ಯು. ವಿನ ಎಲ್ಲಾ ಅಂಗಸಂಸ್ಥೆಗಳು ಮಹಿಳೆಯರಿಗೆ ಸಹಾಯಮಾಡಲು ಮುಂದಾಗಬೇಕೆಂದು ಮಾಡಿದ ಕಳಕಳಿಯ ವಿನಂತಿ...

ಜ್ಯೋತಿಬಾಸುವಿನ ಆಗಮನ... ಗಂಭೀರಸ್ವರದಲ್ಲಿ 'ಪಶ್ಚಿಮ ಬಂಗಾಳ ಮತ್ತು ತ್ರಿಪುರ ಸರಕಾರಗಳು ಆ ರಾಜ್ಯಗಳ ಕಾರ್ಮಿಕರ ಕೈಯ ಅಸ್ತ್ರಮಾತ್ರವಲ್ಲ, ಇಡೀ ದೇಶದ ಕಾರ್ಮಿಕವರ್ಗದ ಅಸ್ತ್ರ. ಅದನ್ನು ಸರಿಯಾಗಿ ಉಪಯೋಗಿಸುವುದು...ನಿಮ್ಮ ಸಂಘಟನೆಯನ್ನು ಬೆಳೆಸಲು, ನಿಮ್ಮ ಬೇಡಿಕೆಗಳನ್ನು ಪಡೆಯಲು ನಿಮ್ಮ ಕೈಯಲ್ಲಿದೆ' ಹೇಳಿದ್ದು...ಎಲ್ಲಾ ಪ್ರತಿನಿಧಿಗಳಿಗೊಂದು ಪಾಠವಾಗಿತ್ತು...ನಮ್ಮ ಸರಕಾರ ಡಿಲ್ಲಿಯಲ್ಲಿ ಬಂದರೆ"...ಎಂಬ ಯೋಚನೆ...

ಆ ವಿಯಟ್ನಾಮ್ ಪ್ರತಿನಿಧಿ ನುಡಿದ ಮಾತುಗಳು ; 'ಹೌದು, ವಿಯಟ್ನಾಮಿನ ಗಡಿಗಳೊಳಗೆ ಚೈನಾದ ಸೈನ್ಯಗಳು ನುಗ್ಗಿ ಆಕ್ರಮಣ ಗೈಯುತ್ತಿದೆ....ಅವುಗಳನ್ನು ಓಡಿಸಲು ನಾವು ಹೋರಾಡುತ್ತಿದ್ದೇವೆ...ಸಂಪೂರ್ಣವಾಗಿ ಆಕ್ರಮಣ ತೆರವು ಮಾಡುವ ತನಕ ವಿಯಟ್ನಾಮ್ ಜನತೆಗೆ ಬಿಡುವಿಲ್ಲ...ಆದರೆ ಚೀನಾದೇಶದ ಜನತೆ ವಿಯಟ್ನಾಮ್ ಜನತೆಗೆ ಸಾಮ್ರಾಜ್ಯಶಾಹಿಗಳನ್ನು ಸೋಲಿಸುವುದಕ್ಕಾಗಿ ಕೊಟ್ಟ ಸಹಾಯ...ಅದನ್ನು ನಾವು ಎಂದೆಂದಿಗೂ ಮರೆಯಲಾರೆವು... ನಮ್ಮ ಮುಂದಿನ ಪೀಳಿಗೆಗಳೂ ಮರೆಯಲಾರವು...ನಮ್ಮ ಉದ್ದೇಶ ಕಾರ್ಮಿಕವರ್ಗದ ಅಂತರರಾಷ್ಟ್ರೀಯತೆಯನ್ನು ಎಂತಹ ಸಂದರ್ಭದಲ್ಲಾದರೂ ಎತ್ತಿಹಿಡಿಯುವುದು....

ಮದ್ರಾಸಿಗೆ ಮದ್ರಾಸ್ಸೇ...ಕೆಂಪು ಧ್ವಜಗಳಿಂದ ಅಲಂಕರಿಸಲ್ಪಟ್ಟಿತ್ತು... ಸಾವಿರಾರು ಮಂದಿಯನ್ನು ಮದ್ರಾಸಿಗೆ ತಮಿಳುನಾಡಿನ ವಿವಿಧ ಭಾಗಗಳಿಂದ ತಂದು ಇಳಿಸುತ್ತಿದ್ದ ಕೆಂಪು ಧ್ವಜಾಲಂಕೃತ ಬಸ್ಸುಗಳು...ಅಲೆ ಅಲೆಗಳಾಗಿ ಹೆಜ್ಜೆಗಳನ್ನಿಡುತ್ತಾ ನಡೆಯುತ್ತಿದ್ದ ಸ್ವಯಂಸೇವಕರು, ಪ್ರತಿನಿಧಿಗಳು, ವಿವಿಧ ಜಿಲ್ಲೆಗಳ ಕಾರ್ಮಿಕ-ರೈತ ಬಂಧುಗಳು...ಎಲ್ಲಕ್ಕೂ ಮುಂದುಗಡೆ ಮುಂದಾಳುಗಳನ್ನು ಹೊತ್ತ ಟ್ರಾಕ್ಟರುಗಳ ಆಮೆ ಚಲನೆ...

ಹೀಗೆ ಒಂದಲ್ಲ, ಎರಡಲ್ಲ...ಹತ್ತು ಹಲವಾರು... ಅನುಭವಗಳು ... ನನ್ನ ಮುಂದಿನ ಕೆಲಸ ಕಾರ್ಯಗಳಿಗೆ, ಜೀವನದ ಕ್ರಾಂತಿಕಾರಿ ಉದ್ದೇಶ ಸಾಧನೆಗೆ ಎಷ್ಟೊಂದು ಸ್ಫೂರ್ತಿ ದೊರೆಯಿತು ಎಂದು ಬೇರೆ ಹೇಳಬೇಕೆ ? ●

ಹಂಚಿನ ಕಾರ್ಮಿಕರ ಮತಪ್ರದರ್ಶನ - ಪ್ರತಿಭಟನಾ ಮುಷ್ಕರ

ತಾ. 6-4-79 ರಂದು ದ. ಕ. ಜಿಲ್ಲಾ ಮಂಗಳೂರು ತಾಲ್ಲೂಕಿನಲ್ಲಿರುವ ಎಲ್ಲಾ ಹಂಚಿನ ಕಾರ್ಖಾನೆಗಳ ಕಾರ್ಮಿಕರ ಬೃಹತ್ ಮೆರವಣಿಗೆಯೊಂದು (ಸಂಜೆ 3 ಗಂಟೆಗೆ ಕೆಲಸ ನಿಲ್ಲಿಸಿ) ಜೆಪ್ಪು-ಬೋಳಾರದಿಂದಲೂ, ಇನ್ನೊಂದು ಮೆರವಣಿಗೆ ಅಶೋಕನಗರ-ಬೋಳೂರು ಕುದ್ರೋಳಿಪ್ರದೇಶಗಳಿಂದಲೂ ಹೊರಟು ಸಂಜೆ ಗಂಟೆ 4-30ಕ್ಕೆ ಹಂಚಿನ ಮಾಲಕರ ಸಂಘಕ್ಕೆ ಮನವಿಯರ್ಪಿಸಿತ್ತು. ಸದರಿ ಮನವಿಯಲ್ಲಿ ಹಂಚಿನ ಕಾರ್ಮಿಕರಿಗೆ ವರ್ಷದ ಸಂಪಾದನೆಯಲ್ಲಿ 15ದಿನಗಳ ವೇತನದಷ್ಟು ಸರ್ವಿಸ್ ವೇತನವನ್ನು ಕಾನೂನು ಪ್ರಕಾರ ಕೊಡಬೇಕಾದುದನ್ನು ಹಂಚಿನ ಮಾಲಕರು ಕೊಡದಿರುವುದನ್ನು ಪ್ರತಿಭಟಿಸಿ, ಅದನ್ನು ಕೂಡಲೇ ಕೊಡಬೇಕೆಂದು ಒತ್ತಾಯಿಸಲಾಗಿತ್ತು. ನಂತರ ಮೆರವಣಿಗೆ ಅಸಿಸ್ಟೆಂಟ್ ಲೇಬರ್ ಕಮೀಷನರರ ಕಛೇರಿಗೆ ತೆರಳಿ ಅಲ್ಲಿ ಮನವಿಯೊಂದನ್ನು ಅವರ ಮುಖಾಂತರ ರಾಜ್ಯದ ಲೇಬರ್‌ಕಮೀಷನರ್‌ರವರಿಗೆ ಕಳುಹಿಸುವಂತೆ ಕೊಡಲಾಯಿತು.

ಆಮೇಲೆ ಬೃಹತ್ ಮೆರವಣಿಗೆಯು ಮಂಗಳೂರಿನ ಕಂಕನಾಡಿ ಮೈದಾನಿನಲ್ಲಿ ಕಾಂ. ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಸಭೆ ಜರುಗಿಸಿತು. ಸಭೆಯಲ್ಲಿ ಕಾಮ್ರೇಡರುಗಳಾದ ಪಿ. ರಾಮಚಂದ್ರ ರಾವ್, ಉಮಾನಾಥನ್ಯಾಕ್, ಬಿ. ಕೊರಗಪ್ಪರೈ, ಬಿ. ಶೀನ ಇವರುಗಳು ಹಂಚಿನಮಾಲಕರ ವಂಚನೆಗಳನ್ನು ವಿರೋಧಿಸಿ ಮಾತಾಡಿದರು. ಕಾಂ. ಬಿ. ನಾರಾಯಣನವರು ಸಭಿಕರನ್ನು ಸ್ವಾಗತಿಸಿದರು. ಈ ಬೃಹತ್ ಪ್ರದರ್ಶನವನ್ನು ಎಸ್. ಕೆ. ಟೈಲ್‌ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಮತ್ತು ದ. ಕ. ಹಂಚಿನ ಕೆಲಸಗಾರರ ಸಂಘ (ಎ.ಐ.ಟಿ.ಯು.ಸಿ) ಏರ್ಪಡಿಸಿತ್ತು. ಇವುಗಳು ಕೊಟ್ಟಕರೆಯ ಮೇರೆಗೆ ತಾ. 10-4-79 ರಂದು ಒಂದು ದಿನದ ಪ್ರತಿಭಟನಾ ಮುಷ್ಕರವನ್ನು ನಡೆಸಿದರು. ಸಾಧಾರಣ ನಾಲ್ಕು ಸಾವಿರ ಹಂಚಿನಕೆಲಸಗಾರರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. (ಕಾನೂನು ಪ್ರಕಾರ ಸರ್ವಿಸ್ ವೇತನ ಕೊಡುವ ಮಂಗಳೂರಿನ ಎರಡು ಕಾಮನ್‌ವೆಲ್ತ್ ಕಾರ್ಖಾನೆಗಳನ್ನು ಬಿಟ್ಟು) ಮಂಗಳೂರಿನ ಯಾವುದೇ ಇತರ ಹಂಚಿನ ಕಾರ್ಖಾನೆಗಳಲ್ಲಿ ಕೆಲಸ ನಡೆದಿಲ್ಲ. ●

ಪೋಲೀಸರಿಂದ ಕಿರುಕುಳ

ಉಪ್ಪಾರಪೇಟೆ ಪೋಲೀಸ್ ಠಾಣೆಗೆ ಸೇರಿದ, ಪೋಲೀಸ್ ಇನ್‌ಸ್ಪೆಕ್ಟರ್ ಮತ್ತವರ ಕೈಕೆಳಗಿನ ಪ್ಯಾದೆಯೊಬ್ಬರು ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುವ ಸಣ್ಣಪುಟ್ಟ ವರ್ತಕರನ್ನು ಬೆದರಿಸಿ ಮಾಮೂಲುಕೊಡಲು ಒತ್ತಾಯಿಸುತ್ತಿದ್ದಾರೆಂದೂ, ಕೊಡಲು ಒಪ್ಪದ ವರ್ತಕರ ಸಾಮಾನುಗಳನ್ನು ಬಿಸಾಕುವುದು ಮುಂತಾದ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆಂದು, "ಬೆಂಗಳೂರು ನಗರ ಕಾಲುದಾರಿ ವ್ಯಾಪಾರಿಗಳ ಸಂಘ"ದ ಅಧ್ಯಕ್ಷರು ಪತ್ರಿಕಾ ಪ್ರಕಟಣೆಯೊಂದರಲ್ಲಿ ದೂರಿದ್ದಾರೆ. ಪೋಲೀಸ್ ಕಮೀಷನರ್ ಮುಂತಾದ ಅಧಿಕಾರಿಗಳಿಗೆ ಈ ಬಗ್ಗೆ ದೂರುಕೊಟ್ಟರೂ ಪ್ರಯೋಜನವಿಲ್ಲದೆ, ಸಂಘದವರು ಪೋಲೀಸರ ಕಿರುಕುಳದಿಂದ ರಕ್ಷಿಸಲು ಮುಖ್ಯಮಂತ್ರಿಯವರಿಗೂ ಮನವಿ ಸಲ್ಲಿಸಿದ್ದಾರೆ. ●

ಯಶವಂತಪುರ ಸಿ.ಐ.ಟಿ.ಯು. ಕಛೇರಿಯ ಮೇಲೆ ಗೂಂಡಾದಾಳಿ "ಪ್ರತಿಭಟನಾ ಸಭೆ"

ದಿನಾಂಕ 12-4-79 ರಂದು ಸಂಜೆ 7ಗಂಟೆಗೆ ಯಶವಂತಪುರ ಸಿ.ಐ.ಟಿ.ಯು ಕಛೇರಿಯೆದುರು 'ಪ್ರತಿಭಟನಾ ಸಭೆ' ಯೊಂದನ್ನು ನಡೆಸಲಾಯಿತು. ದಿನಾಂಕ 10ರಂದು ರಾತ್ರಿ, ಕೆಲವು ಸಮಾಜ ಘಾತುಕ ಶಕ್ತಿಗಳು ಯಶವಂತಪುರದ ಸಿ. ಐ. ಟಿ. ಯು. ಕಛೇರಿಯ ಮೇಲೆ ಹಲ್ಲೆ ನಡೆಸಿ ಬಾವುಟ, ಬೋರ್ಡುಗಳನ್ನು ಕಿತ್ತೊಗೆದಿದ್ದರು. ಈ ಗೂಂಡಾದಾಳಿಯು ಎಂ. ಎಸ್. ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟಿನ ಯಾವುದೋ ಮಾಲೀಕರಿಂದ ಪ್ರೇರಿತವಾಗಿದೆಯೆಂದೂ ತಮ್ಮ ಕಾರ್ಖಾನೆಗಳಲ್ಲಿ ಸಿ. ಐ. ಟಿ. ಯು. ಕಾರ್ಮಿಕರು ನಡೆಸಿದ ಹೋರಾಟಗಳಿಗೆ ಸಂಘದ ವಿರುದ್ಧದ ಸೇಡಿನ ಕ್ರಮವಾಗಿದೆಯೆಂದೂ ಅಭಿಪ್ರಾಯಪಡಲಾಗಿದೆ. ಈ ಸಂಬಂಧದಲ್ಲಿ ಯಶವಂತಪುರ ವಿಭಾಗದ ಪೋಲೀಸ್ ಇನ್‌ಸ್ಪೆಕ್ಟರ್‌ರವರು ಗೂಂಡಾಗಳ ವಿರುದ್ಧ ಕ್ರಮತೆಗೆದುಕೊಳ್ಳುವುದರ ಬದಲು ಕಾರ್ಮಿಕರ ಮೇಲೆ ಬೆದರಿಕೆ ಹಾಕಿರುವುದು ಈ ಧಾಳಿಯ ಪೂರ್ವಯೋಜಿತ ಪೋಲೀಸ್ ಬೆಂಬಲ ಪಡೆದಿದೆಯೆಂಬ ಅಭಿಪ್ರಾಯ ಜನರಲ್ಲಿ ಉಂಟಾಗಿದೆ. ಸಭೆಯನ್ನುದ್ದೇಶಿಸಿ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರವರು ಮಾಲೀಕರ ಗೂಂಡಾಗಿರಿಗೆ ಕಾರ್ಮಿಕರು ಅತಂಕಪಡಬಾರದೆಂದು, ಪೋಲೀಸ್ ಅಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳದಿದ್ದಲ್ಲಿ ಕಾರ್ಮಿಕರೇ ಸಮಾಜ ಘಾತುಕ ಶಕ್ತಿಗಳನ್ನು ಸದೆಬಡಿಯಬೇಕೆಂದು ಕರೆ ನೀಡಿದರು. ಐ. ಟಿ. ಐ. ಕಾರ್ಮಿಕ ಮುಖಂಡರಾದ ಕಾಂ. ಭಾನು, ಕಿರ್ಲೋಸ್ಕರ್ ಕಾರ್ಮಿಕ ಮುಖಂಡ ಕಾಂ. ಸುಬ್ರಹ್ಮಣ್ಯವರು, ವಿದ್ಯಾರ್ಥಿ ಯುವಜನ ಮುಂದಾಳು ಮುನಿನಾರಾಯಣಸ್ವಾಮಿ ಮತ್ತು ಎಸ್. ಎಫ್. ಐ. ರಾಜ್ಯ ಪ್ರಧಾನಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯರವರು ಗೂಂಡಾದಾಳಿಯನ್ನು ಖಂಡಿಸಿ ಮಾತನಾಡುತ್ತಾ ಇದರ ವಿರುದ್ಧ ಹೋರಾಡಲು ಕರೆ ನೀಡಿದರು. ○

ಪ್ರಕಟಣೆ

ಮೇ ಮೊದಲವಾರ ಮತ್ತು ಎರಡನೇ ವಾರದ ಪತ್ರಿಕೆಗಳು ವಿಶೇಷಾಂಕವಾಗಿ ಮೇ ಮಧ್ಯದಲ್ಲಿ ಬರುತ್ತದರಿಂದ ಮೇ 6ರ ಪತ್ರಿಕೆಯನ್ನು ಪ್ರತ್ಯೇಕ ಪ್ರಕಟಿಸುವದಿಲ್ಲ.

ಸಂಪಾದಕ

ಪ. ಬಂಗಾಳದಲ್ಲಿ ವಿದ್ಯುತ್ ಕೊರತೆ : ವಾಸ್ತವಿಕತೆ

ಪ. ಬಂಗಾಳ ಸರಕಾರದ ಪ್ರಗತಿಯನ್ನು ಕಂಡು ಬಲ ಪ್ರತಿಗಾಮಿಗಳಿಗೆ ಅಸೂಯೆಯಾಗುವುದು ಸಹಜ. ಆದರೆ ಎಡ ಪಕ್ಷವೆಂದು ಹೇಳಿಕೊಳ್ಳುವ ಬಲ ಕಮ್ಯುನಿಸ್ಟರಿಗೂ ಜ್ಯೋತಿಬಸು ಸರಕಾರದ ಮೇಲೆ ಉರಿಗಣ್ಣು. ಆದ್ದರಿಂದಲೇ ಕರ್ನಾಟಕದ ಬಲ ಕಮ್ಯುನಿಸ್ಟರ ಮುಖ ಪತ್ರಿಕೆ "ಕೆಂಬಾವುಟ"ದಲ್ಲಿ "ಜ್ಯೋತಿಬಸು ಸರಕಾರ ರೈಲ್ವೆ ಕಾರ್ಮಿಕರ ವಿರೋಧಿ ಸರಕಾರ", ಪ. ಬಂಗಾಳದ ವಿದ್ಯುತ್ ಅಭಾವಕ್ಕೆ ಈಗ 'ಅಧಿಕಾರದಲ್ಲಿರುವ ಎಡರಂಗ ಸರಕಾರವೇ ಕಾರಣ, ಅದು ಕಾರ್ಮಿಕರ ಹೊಟ್ಟೆ ಮೇಲೆ ಹೊಡೆಯುತ್ತಿದೆ' ಮುಂತಾದ ವೃಥಾಲಾಪಗಳು ಬರತೊಡಗಿವೆ. ಒಂದು ವೇಳೆ ನಿಜವಾಗಿಯೂ ಬ. ಕ. ರು (ಬಲ ಕಮ್ಯುನಿಸ್ಟರು) ಹೇಳುವಂತೆ ಪ. ಬಂಗಾಳ ಸರಕಾರ ಕಾರ್ಮಿಕ ವಿರೋಧಿ ಸರಕಾರವೇ ಆಗಿದ್ದರೆ, ಅಲ್ಲಿ ಚುನಾವಣೆಗಳಿಂದ ಚುನಾವಣೆಗೆ ಎಡರಂಗದ ಜಯಭೇರಿ ಮೊಳಗುತ್ತಲೇ ಇರಲಿಲ್ಲ. ಇತ್ತೀಚಿನ ಪ. ಬಂಗಾಳ ಪಂಚಾಯಿತಿ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಮತ್ತದರ ಮಿತ್ರಪಕ್ಷಗಳು ಗಳಿಸಿದ ವಿಜಯ ಎಡರಂಗ ಸರಕಾರಕ್ಕೆ ಇರುವ ಜನಪ್ರಿಯತೆಯನ್ನು ಧೃಡಪಡಿಸಿದೆ. ಇದೇ ಸಮಯದಲ್ಲಿ, ಜನತೆಯನ್ನು ಎದುರಿಸಲು ಧೈರ್ಯವಿಲ್ಲದೆ, ಕೇರಳ ಸರಕಾರ ಪಂಚಾಯಿತಿ ಚುನಾವಣೆಗಳನ್ನು 27ನೇ ಸಾರಿ ಮುಂದಕ್ಕೆ ಹಾಕಿದೆ. ಪ. ಬಂಗಾಳ ಸರಕಾರಕ್ಕೆ ಬುದ್ಧಿ ಹೇಳುವ "ಕೆಂಬಾವುಟ"ದ ಸಂಪಾದಕರು ತಮ್ಮ ಕೇರಳದ ಸಂಗಾತಿಗಳಿಗೆ ಮೊದಲು ಬುದ್ಧಿ ಹೇಳಲಿ.

ವಾಸ್ತವ ಸಂಗತಿ :

ಪ. ಬಂಗಾಳದಲ್ಲಿ 1972ರಿಂದಲೂ ವಿದ್ಯುತ್ ಕೊರತೆಯಿದೆ. ಬಲ ಕಮ್ಯುನಿಸ್ಟರು ಬೆಂಬಲ ನೀಡಿದ್ದ ಶ್ರೀ ಸಿದ್ಧಾರ್ಥ ಶಂಕರ್‌ರಾಯ್‌ರವರ ಸರಕಾರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿಲ್ಲವಾದ್ದರಿಂದ ಸಂತಾಲ್‌ದಿಯಾ ಯೂನಿಟ್‌ನ 120 ಮೆಗಾವಾಟ್‌ನ 3 ಮತ್ತು 4 ಹಾಗೂ ಕೋಲಾಘಾಟ್ ಯೂನಿಟ್‌ನ 210 ಮೆಗಾವಾಟ್‌ನ 1,2 ಮತ್ತು 3ನೇ ನಂಬರಿನ ಜನರೇಟರ್‌ಗಳು ಕೆಲಸ ಮಾಡುತ್ತಿಲ್ಲ. ಈ ಜನರೇಟರ್‌ಗಳು 1977ರಿಂದ ಕೆಲಸ ಮಾಡಬೇಕಾಗಿತ್ತು. ಆದರೆ ಸರಕಾರಧ ಅಲಕ್ಷ್ಯದಿಂದಾಗಿ ಮೇಲಿನ ಜನರೇಟರ್‌ಗಳೇ ಅಲ್ಲದೆ, ಇತರ ಯೂನಿಟ್‌ಗಳೂ ದುಸ್ಥಿತಿಯಲ್ಲಿವೆ. ವಿದ್ಯುತ್ ಉತ್ಪಾದನೆಯಂಥ ಕೆಲಸ ಒಂದು ರಾತ್ರಿಯಲ್ಲಿ ಆಗುವ ಕೆಲಸವಲ್ಲ, ಈ ದಿನ ಸಮಸ್ಯೆಯಿದ್ದರೆ ಅದರ ಮೂಲ ಸಮಸ್ಯೆ 3-4 ವರ್ಷಗಳ ಹಿಂದೆಯೇ ಪ್ರಾರಂಭವಾಗಿರುತ್ತೆ.

ಎಡರಂಗ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ ವಿದ್ಯುತ್ ಯೋಜನೆಗಳನ್ನು ಪೂರ್ತಿಗೊಳಿಸಲು ಕ್ರಮ ತೆಗೆದುಕೊಂಡಿತು, ಆದರೆ ಇದಕ್ಕೆ ದೀರ್ಘ ಕಾಲಾವಧಿಯೂಬೇಕು. ಸಧ್ಯದ ಪರಿಸ್ಥಿತಿಯಿಂದ ಪಾರಾಗಲು ಐದು ಗ್ಯಾಸ್ ಟರ್ಬೈನ್‌ಗಳನ್ನು ಆಮದು ಮಾಡಲಾಯಿತು, ಅವು ಸೆಪ್ಟಂಬರ್ ತಿಂಗಳಿಂದ ಕೆಲಸ ಪ್ರಾರಂಭಿಸುತ್ತವೆ. ಗ್ಯಾಸ್‌ಟರ್ಬೈನ್‌ಗಿಂತ ಶೀಘ್ರವಾಗಿ ಕೆಲಸ ಮಾಡುವ ಬೇರಾವ ಸಾಧನವೂ ಇಲ್ಲದಿರುವುದರಿಂದ, ಸರಕಾರ ಮತ್ತೇನೂ ಮಾಡಲು ಸಾಧ್ಯವಿಲ್ಲ.

ವಿದ್ಯುತ್ ಕ್ಷಾಮ ಪರಿಸ್ಥಿತಿಗೆ ಅನೇಕ ಕಾರಣಗಳು ಉಂಟು. ಮೊದಲನೆಯದಾಗಿ ಅನೇಕ ವರ್ಷಗಳಿಂದ ವಿದ್ಯುತ್ ಜನರೇಟರ್‌ಗಳ ಶುದ್ಧೀಕರಣಕ್ಕೆ ಅನೇಕ ವರ್ಷಗಳಿಂದ ಹಿಂದಿನ ಸರಕಾರ ಗಮನ ಕೊಟ್ಟಿರಲಿಲ್ಲ. ಕ್ರಮಬದ್ಧವಾದ ಶುದ್ಧೀಕರಣವಿಲ್ಲದೆ, ಹಲವಾರು ವರ್ಷಗಳಿಂದ ಸತತವಾಗಿ ಕೆಲಸ ಮಾಡುತ್ತಿವೆ. ಎಡರಂಗ ಸರಕಾರ ಈಗ ಯಂತ್ರಗಳ ಶುದ್ಧೀಕರಣ ಕೆಲಸಕ್ಕೆ ಗಮನ ಕೊಡುತ್ತಿರುವುದರಿಂದ ಸಹಜವಾಗಿ ತೊಂದರೆಯಾಗಿದೆ, ಬದಲಿ ಜನರೇಟರ್ ಯಂತ್ರಗಳು ಇಲ್ಲದೇ ಇರುವುದು, ತೊಂದರೆ ಹೆಚ್ಚಾಗಿದೆ. ಸಧ್ಯಕ್ಕೆ, ಎರಡು ಯೂನಿಟ್‌ಗಳ ಶುದ್ಧೀಕರಣ ಕೆಲಸ ನಡೆಯುತ್ತಿದೆ. ಸಂಟಾಲ್‌ಡಿಯಾದ ಒಂದು ಯೂನಿಟ್ ಡಿಸೆಂಬರ್ 9, 1978ರಿಂದ 11 ಬಾರಿ ಒಡೆದು ಹೋಗಿರುವುದಲ್ಲದೆ, ಬಂಡೇಲ್‌ನಲ್ಲಿರುವ 3 ಯೂನಿಟ್‌ಗಳು ಸೋರುವಿಕೆಯಿಂದಾಗಿ ಕೆಲಸ ಮಾಡುತ್ತಿಲ್ಲ. ಎರಡನೆಯದಾಗಿ, ಕಲ್ಲಿದ್ದಲಿನ ಕೊರತೆಯಿಂದಾಗಿ 70 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಧಕ್ಕೆಯಾಗಿದೆ.

ಈ ಹಿಂದೆ ನಿಷ್ಫಲವಾಗಿದ್ದ ದುರ್ಗಾಪುರ ಪ್ರಾಜೆಕ್ಟ್ ಲಿಮಿಟೆಡ್ ಸ್ವಲ್ಪ ಪ್ರಗತಿಯನ್ನು ತೋರಿಸಿದೆ, ಈಗ ಅದು 25 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸುತ್ತಿದೆ, ಕೆಲವು ಕಾಲದ ನಂತರ ಮತ್ತೆ 80 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಈ ಯೂನಿಟ್‌ಗೆ ಇದೆ. ಒಟ್ಟು 250 ಮೆಗಾವಾಟ್ ವಿದ್ಯುತ್ ಕೊರತೆ ಇರುವುದರಿಂದ ಕನಿಷ್ಟ ಅಗತ್ಯಗಳನ್ನು ಮಾತ್ರ ಪೂರೈಸಲು ಸರಕಾರಕ್ಕೆ ಸಾಧ್ಯವಾಗಿದೆ. ಬೇರೆ ರಾಜ್ಯಗಳಿಂದ ವಿದ್ಯುತ್ತನ್ನು ಪಡೆಯಲು ಸಹಾ ಪ್ರಯತ್ನಿಸಲಾಗುತ್ತಿದೆ.

ಮೇಲ್ಕಾಣಿಸಿದ ಪರಿಸ್ಥಿತಿಯಿಂದಾಗಿ. ಎಲ್ಲಾ ಕಾರ್ಖಾನೆಗಳು ಕನಿಷ್ಟ ಅಗತ್ಯಕ್ಕೆ ಮಾತ್ರ ವಿದ್ಯುತ್ ಬಳಸಬೇಕೆಂದು ಸರಕಾರ ತಿಳಿಸಿದೆ. ಅಲ್ಲದೆ. ಎಲ್ಲಾ ಅಂಗಡಿಗಳು ಮತ್ತು ಸಂಸ್ಥೆಗಳು 7 ಗಂಟೆಗೆ ಮುಚ್ಚಬೇಕೆಂದು ಸರಕಾರ ಕಾನೂನು ಮಾಡಿದೆ. ವಿದ್ಯುತ್ತನ್ನು ಬೆಳಿಗ್ಗೆ 5ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಬಳಸಬಹುದೆಂದು ಸರಕಾರ ವಿದ್ಯುತ್ ನಿಯಂತ್ರಣ ಆಜ್ಞೆಯನ್ನು ಜಾರಿಗೆ ತಂದಿದೆ.

ಏಪ್ರಿಲ್ 14ರ ವೇಳೆಗೆ ಎರಡು ಯೂನಿಟ್‌ಗಳು ಕೆಲಸ ಪ್ರಾರಂಭಿಸುತ್ತವೆ. ಕಲ್ಲಿದ್ದಲು ಪೂರೈಕೆಯೂ ಉತ್ತಮಗೊಳ್ಳುತ್ತಿದೆ. 16ನೇ ಮಾರ್ಚಿ 1979ರಂದು ಕಾಂ. ಜ್ಯೋತಿಬಸುರವರು ಮಾತನಾಡುತ್ತಾ-"ಯಂತ್ರಗಳು ಮಾತ್ರ ಮುಖ್ಯವಲ್ಲ ಯಂತ್ರಗಳ ಹಿಂದಿರುವ ಕಾರ್ಮಿಕರೂ ಮುಖ್ಯ, ಹಿಂದಿನ ಸರಕಾರ ರಾಜ್ಯ ವಿದ್ಯುತ್ ಮಂಡಳಿಗೆ 12000 ಜನರನ್ನು ನೇಮಕ ಮಾಡಿದೆ. ಆದರೆ ಇವರಲ್ಲಿ ಅನೇಕರಿಗೆ ಕನಿಷ್ಟ ತಾಂತ್ರಿಕ ಜ್ಞಾನವೂ ಇಲ್ಲ. ಅಲ್ಲದೆ, ಇಷ್ಟು ಬೃಹತ್ ಪ್ರಮಾಣದ ನೇಮಕಾತಿಗಳು ನಡೆದಾಗ ತಾಂತ್ರಿಕವಾಗಿ ಬಹು ಮುಖ್ಯವಾದ ಹುದ್ದೆಗಳನ್ನು ಖಾಲಿ ಬಿಡಲಾಗಿದೆ.

ಸರಕಾರ ತನ್ನಿಂದ ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ವಿದ್ಯುತ್ ತೊಂದರೆಯಿಂದ ಜನಸಾಮಾನ್ಯರಿಗೆ ಹಾಗೂ ಕಾರ್ಮಿಕವರ್ಗಕ್ಕೆ ಉಂಟಾಗಿರುವ ತೊಂದರೆಯ ಬಗ್ಗೆ ಸರಕಾರಕ್ಕೆ ಅಪಾರ ಕಳಕಳಿಯಿದೆ. ತೊಂದರೆಯ ಹಿನ್ನೆಲೆಯನ್ನು ಅರಿತು ಅದರ ಪರಿಹಾರಕ್ಕೆ ಎಲ್ಲಾ ಕಡೆಯಿಂದಲೂ ಸಹಕಾರ, ಸಹಾಯವನ್ನು ಪ. ಬಂಗಾಳ ಸರಕಾರ ಕೇಳಿಧೆ.

●

ವಿಯೆತ್ನಾಂ ವಿರೋಧಿ ನೀತಿಯನ್ನು ಚೀನಿ ನಾಯಕರು ತ್ಯಜಿಸಬೇಕು

—ಲೀಟುವ್ಯಾ

(ವರದಿ : ನಮ್ಮ ಪ್ರತಿನಿಧಿಯಿಂದ)

ಚೀನಿ ನಾಯಕರು ವಿಯೆತ್ನಾಂ ವಿರೋಧಿ ನೀತಿಯನ್ನು ತ್ಯಜಿಸಬೇಕೆಂದು ವಿಯೆತ್ನಾಂ ಶಾಂತಿ ನಿಯೋಗದ ಸದಸ್ಯ ಲೀಟುವ್ಯಾ ಅವರು ಮನವಿ ಮಾಡಿದ್ದಾರೆ.

ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಮಿತಿಯ ಆಹ್ವಾನದ ಮೇರೆಗೆ ಪ್ರಸ್ತುತದಲ್ಲಿ ಭಾರತ ಪ್ರವಾಸ ಮಾಡುತ್ತಿರುವ ಶ್ರೀಯುತರು ಇತ್ತೀಚಿಗೆ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಚೀನಿ ಆಡಳಿತಗಾರರು ಕಳೆದ 20 ವರ್ಷಗಳಿಂದಲೇ ವಿಯೆತ್ನಾಂವಿರೋಧಿ ನಿಲುವನ್ನು ಹೊಂದಿದ್ದಾರೆಂದು ಆಪಾದಿಸಿದ ಲೀಟುವ್ಯಾ ಅವರು ವಿಯೆತ್ನಾಂ ಮೇಲಿನ ಇತ್ತೀಚಿನ ಅವರ ಧಾಳಿಯ ಹಿಂದೆ ಅಮೆರಿಕಾ ಸಾಮ್ರಾಜ್ಯಶಾಹಿಯ ಕೈವಾಡವಿದೆ ಎಂದರು.

ತಮ್ಮ ದೇಶವು ಶಾಂತಿಪ್ರಿಯ ದೇಶವೆಂತಲೂ, ಕಳೆದ ಮುವ್ವತ್ತು ವರ್ಷಗಳ ದೀರ್ಘಕಾಲ ಬಲಿಷ್ಟ ಅಮೆರಿಕಾ ಸಾಮ್ರಾಜ್ಯಶಾಹಿಯೊಂದಿಗೆ ಹೋರಾಡಿ ಜರ್ಝರಿತಗೊಂಡಿರುವ ತಮ್ಮಂತಹ ದೇಶಕ್ಕೆ ಮತ್ತೊಂದು ದೇಶದ ಮೇಲೆ ಆಕ್ರಮಣಕ್ಕೆ ತೊಡಗುವುದು ಸಾಧ್ಯವೆ ಎಂದು ಅವರು ಪ್ರಶ್ನಿಸಿದರು. "ನೀವೂ ಸಹ ಕಾಂಬೋಡಿಯಾದ ಮೇಲೆ ಧಾಳಿಮಾಡಿದ್ದೀರಿ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆಯಲ್ಲಾ" ಎಂಬ ಪತ್ರಕರ್ತರೊಬ್ಬರ ಪ್ರಶ್ನೆಗೆ ಲೀಟುವ್ಯಾ ಅವರು ಮೇಲಿನಂತೆ ಉತ್ತರಿಸಿದರು.

ತಮ್ಮ ದೇಶದ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನು ಬಹುವಾಗಿ ಪ್ರೀತಿಸುವ ವಿಯೆತ್ನಾಂ ಜನತೆಯು ಅದನ್ನು ರಕ್ಷಿಸಲು ಯಾರೊಂದಿಗೆಬೇಕಾದರೂ, ಎಷ್ಟು ಸಮಯಬೇಕಾದರೂ ಹೋರಾಡಲು ಸಿದ್ಧ ಎಂದು ವಿಯೆತ್ನಾಂ ನಾಯಕರು ಘೋಷಿಸಿದರು. ಚೀನಿ ಜನತೆಯೊಂದಿಗೆ ತಮಗೆ ನಿರಂತರ ಸ್ನೇಹ, ಸೌಹಾರ್ದ ಮತ್ತು ಉತ್ತಮ ಸಂಬಂಧಗಳು ಬೇಕೆಂದೂ ಸಹ ಅವರು ತಿಳಿಸಿದರು. ಚೀನಿ ನಾಯಕರು ಇತ್ತೀಚೆಗೆ ನಡೆಸಿದ ದುರಾಕ್ರಮಣವನ್ನು ಇಡೀ ಜಗತ್ತೇ ಖಂಡಿಸಿದೆ ಎಂಬುದನ್ನು ಎತ್ತಿ ತೋರಿಸಿದ ಶಾಂತಿ ನಿಯೋಗದ ಸದಸ್ಯರು ತಮಗೆ ಬೆಂಬಲವಿತ್ತ ಎಲ್ಲ ದೇಶದ ಜನತೆಗೆ ಅದರಲ್ಲೂ ವಿಶೇಷತಃ ಸಮಾಜವಾದಿ ಜಗತ್ತಿನ ಜನತೆಗೆ ವಂದನೆ ಸಲ್ಲಿಸಿದರು.

ಅನಕ್ಷರತೆಯು ನಿವಾರಣೆ :

ವಿಮೋಚನೆಯ ನಂತರ ವಿಯೆತ್ನಾಂನ ಕಮ್ಯುನಿಸ್ಟ್ ಸರ್ಕಾರ ಮಾಡಿರುವ ಸಾಧನೆಗಳ ಬಗ್ಗೆ ಕೇಳಲಾದ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಲೀಟುವ್ಯಾ ಅವರು, ಮೂರುವರ್ಷಗಳಷ್ಟು ಕಡಿಮೆ ಸಮಯದಲ್ಲಿ ದೇಶದಲ್ಲಿನ ನಿರಕ್ಷರತೆಯನ್ನು ಹೋಗಲಾಡಿಸಿದ್ದೇವೆಂತಲೂ, ಇದಕ್ಕೆ ಅಲ್ಲಿನ ಜನತೆ ವಿಶೇಷತಃ ವಿದ್ಯಾರ್ಥಿಗಳು ಸ್ವತಃ ತಾವೇ ಮುಂದೆ ಬಂದು ದುಡಿದರೆಂದು ಹೇಳಿದರು. ನೀರಾವರಿ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಲಾಗಿದೆ ಎಂದು ಹೆಮ್ಮೆಯಿಂದ ಹೇಳಿದ ವಿಯೆತ್ನಾಂ ನಾಯಕರು ಸಾಮ್ರಾಜ್ಯಶಾಹಿ ಯುದ್ಧದಲ್ಲಿ ನುಚ್ಚುನೂರಾಗಿದ್ದ ತಮ್ಮ ಆರ್ಥಿಕ ಕ್ಷೇತ್ರಕ್ಕೂ ಈಗ ಪುನಶ್ಚೇತನ ಕೊಡಲಾಗಿದೆ ಎಂದು ಹೇಳಿದರು.

ಯುದ್ಧದಿಂದ ತೊಂದರೆ :

ಬಂಡವಾಳಶಾಹಿ ಅರ್ಥವ್ಯವಸ್ಥೆಯ ಅನಿಷ್ಟಗಳಾದ ವೇಶ್ಯಾವಾಟಿಕೆ ಮತ್ತು ನಿರುದ್ಯೋಗದಂತಹ ಭೀಕರ ಸಮಸ್ಯೆಗಳನ್ನು ನಿವಾರಿಸಿ ರಾಷ್ಟ್ರದ ಪುನರ್ ನಿರ್ಮಾಣದತ್ತ ಹೋಗುತ್ತಿದ್ದ ನಮ್ಮ ಮೇಲೆ ಚೀನಿಯ ನಾಯಕರು ಆಕ್ರಮಣ ಮಾಡಿದ್ದು ಖಂಡನೀಯ ಎಂದರು.

ಹಾನಾಯ್‌ನಲ್ಲಿ ಎರಡೂ ದೇಶಗಳ ನಡುವೆ ಪ್ರಸ್ತುತ ನಡೆಯುತ್ತಿರುವ ಮಾತುಕತೆಗಳು ಫಲಪ್ರದವಾಗಲಿ ಎಂದು ಲೀಟುವ್ಯಾ ಆಶಿಸಿದರು.

ಭಾರತ ಸರ್ಕಾರವು ತಮ್ಮ ದೇಶಕ್ಕೆ 3 ಕೋಟಿ ರೂಪಾಯಿಗಳಷ್ಟು ಸಾಲ ಕೊಟ್ಟಿದೆ ಎಂದು ನುಡಿದ ಅವರು ಯುದ್ಧದಲ್ಲಿ ನೊಂದ ವಿಯೆತ್ನಾಂ ಜನತೆಗೆ ಭಾರತದ ಜನತೆಯು ಔಷಧ ಕಾಣಿಕೆಯನ್ನು ನೀಡುತ್ತಿದ್ದಾರೆ ಎಂದೂ ಹೇಳಿ ತಮಗೆ ಕೊಟ್ಟ ಸ್ವಾಗತ ಹಾಗೂ ಸಹಾಯಕ್ಕೆ ವಂದಿಸಿದರು.

●

ವಿದ್ಯುಚ್ಛಕ್ತಿ ಕೊರತೆಯ ಬಗ್ಗೆ ರೈತರ ಕಳವಳ

ಕೋಲಾರ ಜಿಲ್ಲಾ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ತೊಂದರೆಯಾಗಿರುವುದರಿಂದ ವ್ಯವಸಾಯಗಾರರಿಗೆ ಹಾಗೂ ಸಣ್ಣ ಕೈಗಾರಿಕೆಗಳಿಗೆ ಧಕ್ಕೆಯುಂಟಾಗಿದೆ. ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಕೆಲಸವಿಲ್ಲದೆ ತಿರುಗಬೇಕಾಗಿದೆ. ಬೇಸಿಗೆಯಲ್ಲಿ ಅಧಿಕ ನೀರು ಅಗತ್ಯವಿರುವಾಗ ವಿದ್ಯುಚ್ಛಕ್ತಿಯ ತೊಂದರೆಯಿಂದ. ಬೆಳೆಗಳಿಗೆ ಅಪಾರ ನಷ್ಟವುಂಟಾಗುವ ಸಂಭವವಿದೆ. ಆದ್ದರಿಂದ ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಅಧಿಕಾರಿಗಳಿಗೆ ಒತ್ತಾಯಿಸಿ, ಕೋಲಾರಜಿಲ್ಲೆ, ಶಿಡ್ಲಘಟ್ಟ ರೈತಸಂಘದ ಆಶ್ರಯದಲ್ಲಿ ತಾ. 1-4-79 ರಂದು ಬಹಿರಂಗ ಸಭೆ ನಡೆಯಿತು. ತಾಲ್ಲೂಕು ರೈತಸಂಘದ ಉಪಾಧ್ಯಕ್ಷರಾದ ಕಾಂ. ಕೊಂಡಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಜೆ. ದೊರೆಸ್ವಾಮಿಯವರು ಸಭೆಯನ್ನು ಸ್ವಾಗತಿಸುತ್ತಾ, ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಕೊನೆಯಲ್ಲಿ ಕಾಂ. ಎಂ. ಮುನಿಕೃಷ್ಣಪ್ಪನವರು ವಂದಿಸಿದರು.

ತಾ. 9-4-79ರಂದು ಶಿಡ್ಲಘಟ್ಟ ರೈತಸಂಘದ ಆಶ್ರಯದಲ್ಲಿ ವಿದ್ಯುಚ್ಛಕ್ತಿ

[7ನೇ ಪುಟ ನೋಡಿ]

ಪ್ರಜಾಪ್ರಭುತ್ವ, ರಾಷ್ಟ್ರೀಯ ಪ್ರಗತಿಗಾಗಿ ಭಾರತೀಯ ರೈತರ ಹೋರಾಟ

ಇ.ಎಂ.ಎಸ್. ನಂಬೂದಿರಿಪಾಡ್

ನಲವತ್ಮೂರು ವರ್ಷಗಳ ಹಿಂದೆ, ಎಂದರೆ 1936ರ ಬೇಸಿಗೆಯಲ್ಲಿ ಅಖಿಲ ಭಾರತ ಕಿಸಾನ್‌ಸಭೆ ರೂಪುಗೊಂಡಾಗ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಹೊಸ ಅಧ್ಯಾಯವೇ ಆರಂಭವಾಯಿತು. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರೂ ಕೂಡ ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಭಾಗವಹಿಸುವುದು ಇದರಿಂದ ಪ್ರಾರಂಭವಾಯಿತು.

ದೇಶದ ಮೇಲೆ ಬ್ರಿಟಿಷ್ ಆಡಳಿತಗಾರರು ಪ್ರಭುತ್ವ ಸ್ಥಾಪಿಸಿದ ದಿನದಿಂದಲೂ ರೈತರು ಒಂದಲ್ಲ ಒಂದು ರೀತಿಯಲ್ಲಿ ಈ ವಿದೇಶೀ ಆಡಳಿತಗಾರರ ವಿರುದ್ಧ ವೀರೋಚಿತವಾಗಿ ಹೋರಾಡುತ್ತಿದ್ದರು. ಹೋರಾಟದ ಮೊದಲನೇ ಹಂತದಲ್ಲಿ, ಬ್ರಿಟಿಷ್ ದೊರೆಗಳಿಂದ ತಮ್ಮ ಸ್ವಾಮಿತ್ವಕ್ಕೆ ಕೊನೆ ತಂದುಕೊಂಡಿದ್ದ ಊಳಿಗಮಾನ್ಯ ಶ್ರೀಮಂತ ಮಾಲೀಕರು ಈ ರೈತರ ನೇತೃತ್ವ ವಹಿಸಿದ್ದರು. ಬೇರೆ ಮಾತಿನಲ್ಲಿ ಹೇಳುವುದಾದರೆ, ಈ ರೈತರು ತಮ್ಮ ವರ್ಗ ಶೋಷಕರ ಜೊತೆ, ಎಂದರೆ ರಾಜರು, ಸ್ಥಳೀಯ ಮುಖಂಡರು, ಊಳಿಗಮಾನ್ಯ ಜಮೀನ್ದಾರರು ಮುಂತಾದವರ ಜೊತೆ ಸೇರಿಕೊಂಡು, ದೇಶವನ್ನು ಶೋಷಿಸುತ್ತಿದ್ದ ಶತ್ರುವಿನ ವಿರುದ್ಧ ಹೋರಾಡಿದರು.

ರೈತರನ್ನು ಸ್ವಾತಂತ್ರ್ಯ ಹೋರಾಟದ ಮುಂಚೂಣಿಗೆ ಕರೆತಂದ ಅನೇಕ ವೀರಾವೇಶದ ಘಟನೆಗಳು ಈ ಅವಧಿಯಲ್ಲಿ ನಡೆದವು. ವಿದೇಶಿ ಶತ್ರುವಿನ ವಿರುದ್ಧ ಯಾರ ಕೈಕೆಳಗೆ ಸೇರಿ ಹೋರಾಡುತ್ತಿದ್ದರೋ ಅವರೇ ತಮ್ಮ ವರ್ಗಶೋಷಕರಾಗಿದ್ದರೂ ಕೂಡ, ಸಾವಿರಾರು ರೈತರು ಈ ಹಳೆ ವ್ಯವಸ್ಥೆಯನ್ನು ಎತ್ತಿನಿಲ್ಲಿಸುವ ನಿಷ್ಫಲ ಪ್ರಯತ್ನದಲ್ಲಿ ಜೀವ ಕಳೆದುಕೊಂಡರು. 1850ರ ದಶಕದಲ್ಲಿ ಉತ್ತರಭಾರತದುದ್ದಕ್ಕೂ ಹರಡಿಕೊಂಡ "ಸಿಪಾಯಿ ದಂಗೆ" ಮತ್ತು ರಾಷ್ಟ್ರೀಯ ದಂಗೆಗಳು, ಸ್ವಾತಂತ್ರ್ಯ ಹೋರಾಟದ ಈ ಹಂತವನ್ನು ಪ್ರತಿನಿಧಿಸುತ್ತವೆ. ಈ ಹಂತದ ಹೋರಾಟದ ನಾಯಕರು ಸೋಲೊಪ್ಪಿಕೊಂಡು "ಚಕ್ರವರ್ತಿನಿಯ ವಿಧೇಯ ಹಿಂಬಾಲಕ"ರಾಗಿ ತಮನ್ನು ತಾವು ಬದಲಾಯಿಸಿಕೊಳ್ಳಬೇಕಾಯಿತು.

ರೈತ ಆಂದೋಲನ :

ಕೆಲವು ದಶಕಗಳ ಮೌನದ ನಂತರ, ದುಡಿಯುವ ಜನರ ಇತರ ಗುಂಪುಗಳ ಜೊತೆ, ರೈತರೂ ದೇಶದ ಶೋಷಕರ ವಿರುದ್ಧ ದಂಗೆಯ ಬಾವುಟ ಎತ್ತಿಹಿಡಿದರು. ಈ ಬಾರಿ ಅವರ ನಾಯಕತ್ವವನ್ನು ಆಗತಾನೇ ಹುಟ್ಟುತ್ತಿದ್ದ ರಾಷ್ಟ್ರೀಯ ಬೂರ್ಜ್ವಾವರ್ಗ ವಹಿಸಿತ್ತು. "ಪೈಶಾಚಿಕ" ಬ್ರಿಟಿಷ್ ದೊರೆಗಳಿಗೆ ಅಸಹಕಾರ ನೀಡುವ ಮತ್ತು "ಖಿಲಾಫತ್" ದುರಂತಗಳಿಗೆ ಪರಿಹಾರ ಕೇಳುವ ಕರೆಗಳು ಲಕ್ಷಾಂತರ ರೈತರನ್ನು ಕಲಕಿದವು. ಅವರು ಜಾತಿ, ಭೇದ, ಭಾಷೆಗಳ ವ್ಯತ್ಯಾಸಗಳನ್ನು ಮರೆತು ಒಟ್ಟಾದರು.

ಭಾರತದ ಇತಿಹಾಸದಲ್ಲೇ ಮೊದಲಬಾರಿಗೆ, ರೈತರು ಸ್ವಾತಂತ್ರ್ಯ ಹೋರಾಟಗಾರರ ಪಂಕ್ತಿಗೆ ಸೇರಿದರು. ಈ ಬಾರಿ ಅವರ ಉದ್ದೇಶವು (ಸ್ವಾತಂತ್ರ್ಯ ಚಳುವಳಿಯ ಮೊದಲ ಹಂತದ ಉದ್ದೇಶವಾಗಿದ್ದಂತೆ) ಹಳೆವ್ಯವಸ್ಥೆಯನ್ನು ಎತ್ತಿ ನಿಲ್ಲಿಸುವುದಾಗಿರಲಿಲ್ಲ. ಈ ಬಾರಿ ದೇಶದ ರಾಜಕೀಯ ಜೀವನ ಮತ್ತು ರಾಷ್ಟ್ರೀಯ ಜೀವನದ ಇತರ ರಂಗಗಳಲ್ಲಿ ಆಧುನಿಕತೆಯನ್ನು ತರುವುದು ಅವರ ಉದ್ದೇಶವಾಗಿತ್ತು. ಒಂದು ಆಧುನಿಕ ರಾಜಕೀಯ ವ್ಯವಸ್ಥೆಯ ಬಯಕೆ, ಜೊತೆಗೆ ವಿದೇಶಿ ಆಳಿಕೆಯಿಂದ ಮುಕ್ತಿ–ಈ ಆಸೆಗಳು ದುಡಿಯುವ ಜನತೆಯ ಇತರ ಗುಂಪುಗಳನ್ನು ಆವರಿಸಿದಂತೆ ರೈತಜನಾಂಗವನ್ನೂ ಆವರಿಸಿತ್ತು.

ಸ್ವಾತಂತ್ರ್ಯ ಚಳುವಳಿಯ ಒಂದು ಅಂಗ :

ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಅನಿವಾರ್ಯ ಅಂಗವಾಗಿದ್ದ ರೈತವರ್ಗವು ಪುನಃ ವೀರಾವೇಶದಿಂದ ಹೋರಾಡಿ, ಅದರಲ್ಲಿ ಅನೇಕರು ಈ ಉದ್ದೇಶಕ್ಕಾಗಿ ಜೀವ ಕಳೆದುಕೊಂಡರು. ರಾಷ್ಟ್ರೀಯ ಬೂರ್ಜ್ವಾವರ್ಗದ ನೇತೃತ್ವದಲ್ಲಿ ಸಂಘಟಿತರಾಗಿದ್ದರೂ ಕೂಡ, ತಾವು ಬರೇ ಗುಂಪಿನ ಹಿಂಬಾಲಕರಲ್ಲ, ತಮ್ಮದೇ ಆದ ಸ್ವತಂತ್ರ ಕ್ರಿಯೆಯ ರೂಪಗಳೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಸೇರಿದ್ದೇವೆ ಎಂಬುದನ್ನು ರೈತರು ತೋರಿಸಿಕೊಂಡರು. ಸ್ವಾತಂತ್ರ್ಯ ಚಳುವಳಿಯ ಬೂರ್ಜ್ವಾ ನಾಯಕರಿಗೆ ಇದು ವಿಪರೀತವೆನಿಸಿ, ನಾಯಕರಲ್ಲಿ ಅಗ್ರರಾಗಿದ್ದ ಮಹಾತ್ಮಾಗಾಂಧಿಯವರು, ರೈತರನ್ನು ಸಾಮ್ರಾಜ್ಯಶಾಹಿ ವಿರೋಧಿ ಕ್ರಿಯಾಚರಣೆಗೆ ಕರೆದದ್ದು ಒಂದು "ಮಹಾಪರಾಧ"ವಾಯಿತು ಎಂಬುದನ್ನು "ಒಪ್ಪಿಕೊಂಡರು".

ಕಿಸಾನ್‌ಸಭೆಯ ರಚನೆ :

ಇದಾದ ನಂತರ, ರೈತಜನಾಂಗವು ತನ್ನದೇ ಆದ ಉದ್ದೇಶಗಳು, ಗುರಿಗಳು, ಸಂಘಟನೆಯ ಸ್ವರೂಪಗಳು ಹೋರಾಟದ ದಾರಿಗಳು ಮುಂತಾದುವನ್ನು ಒಳಗೊಂಡ ತನ್ನದೇ ಆದ ಒಂದು ಅಖಿಲ-ಭಾರತ ಸಂಘಟನೆಯನ್ನು (ಅಖಿಲ-ಭಾರತ ಕಿಸಾನ್‌ಸಭೆ) ಕಟ್ಟಿಕೊಳ್ಳಲು ಸುಮಾರು ಒಂದೂವರೆ ದಶಕಗಳ ಅವಧಿ ಹಿಡಿಸಿತು. ತಮ್ಮದೇ ಆದ ಸ್ವತಂತ್ರ ಸಂಘಟನೆಯನ್ನು ಆದಾಗಲೇ ಕಟ್ಟಿಕೊಂಡಿದ್ದ ಕೈಗಾರಿಕೆಗಳ ಕಾರ್ಮಿಕವರ್ಗದಿಂದ ರೈತರಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ಸಿಕ್ಕಿತು. ಕಿಸಾನ್‌ಸಭೆಗಿಂತ ಒಂದೂವರೆ ದಶಕಗಳಷ್ಟು ಹಿಂದೆಯೇ ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ತನ್ನ ಅನೇಕ ಸಂಘ್ಯೆಯ ಕಾರ್ಮಿಕಸಂಘಗಳೊಡನೆ ಇಡೀ ದೇಶದಾದ್ಯಂತ ಹರಡಿತ್ತು.

ಕಾರ್ಮಿಕರ ಈ ಸಾಮೂಹಿಕ ಸಂಘಟನೆಯ ರಚನೆಗೆ ಸಮಾನವಾಗಿ, ದೇಶದ ಅನೇಕ ಭಾಗಗಳಲ್ಲಿ ಎಡ ವಿಚಾರವಾದಿಗಳ, ಸಮಾಜವಾದಿಗಳ ಮತ್ತು ಸಮತಾವಾದಿಗಳ ಗುಂಪುಗಳು ಹುಟ್ಟಿಕೊಂಡಿದ್ದವು. ಇವರೆಲ್ಲರ ಚಟುವಟಿಕೆಗಳನ್ನು ಕ್ರೋಢೀಕರಿಸಿ ಅವರ ಒಂದು ಕೇಂದ್ರ ಸಂಘಟನೆಯನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಲಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ 1920ರ ಹೊತ್ತಿಗೆ ಬೂರ್ಜ್ವಾ ನೇತೃತ್ವದಲ್ಲಿ ಕಾರ್ಮಿಕರು ಮತ್ತು ರೈತರು ಒಂದಾಗಿದ್ದು, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಅನಿವಾರ್ಯ ಅಂಗವಾಗಿ ರೂಪುಗೊಂಡಿದ್ದು, ಮುಂದಿನ ಸ್ವರೂಪದ ಚಿತ್ರವನ್ನು ತೋರಿಸುವಂತೆ ಆಗಿತ್ತು. ದೇಶದ ವಿವಿಧ ಭಾಗಗಳಲ್ಲಿ ಕಿಸಾನ್‌ಸಭೆಗಳ ರಚನೆಯಾಗುವುದಕ್ಕೆ ದಾರಿ ಸುಗಮವಾಯಿತು. ಈ ಎಲ್ಲ ಸಂಘಟನೆಗಳ ಚಟುವಟಿಕೆಗಳನ್ನು ಕ್ರೋಢೀಕರಿಸಿ, ಅವುಗಳಿಗೆ ಅಖಿಲಭಾರತ ಸ್ವರೂಪವನ್ನು ಕೊಡುವುದಕ್ಕಾಗಿ, ಅಖಿಲ ಭಾರತ ಕಿಸಾನ್ ಸಭೆಯು 43 ವರ್ಷಗಳ ಹಿಂದೆ ರಚಿತವಾಯಿತು.

ಭಾರತೀಯ ರೈತಜನಾಂಗದ ಹೊಸ ಸಂಘಟನೆಗೆ ಈ ಪ್ರಾರಂಭವು ತನ್ನದೇ ಆದ ವಿಶಿಷ್ಟ ವರ್ಗರಾಜಕೀಯ ಸ್ವರೂಪವನ್ನು ತಂದು ಕೊಟ್ಟಿತು. ಅದು ಮೂಲಭೂತವಾಗಿ ಸಾಮ್ರಾಜ್ಯಶಾಹಿ ವಿರೋಧಿಯಾಗಿತ್ತು. ಏಕೆಂದರೆ ರೈತ ಜನಾಂಗವೂ ಸೇರಿದಂತೆ ಎಲ್ಲ ದುಡಿಯುವ ಜನತೆಯ ವಿಮೋಚನೆಯಾಗಬೇಕಾದರೆ, ಬ್ರಿಟಿಷ್ ಆಳ್ವಿಕೆಯಿಂದ ಬಿಡುಗಡೆಯಾಗಿ ಸಂಪೂರ್ಣ ಸ್ವಾತಂತ್ರ್ಯ ಬರುವುದು ಅಗತ್ಯವಾಗಿದ್ದರಿಂದ, ರೈತಜನಾಂಗವೂ ಇತರೆ ವರ್ಗಗಳ ಜೊತೆ ಈ ವಿಚಾರದಲ್ಲಿ ಒಂದಾಗಿತ್ತು. ಸಂಘಟಿತ ಕಿಸಾನ್ ಚಳುವಳಿಯ ಒಂದೇ ಒಂದು ನಿರ್ಣಾಯಕ ಅಂಶ ಇದಾಗಿತ್ತು. ಇದರ ಜೊತೆಗೆ, ವರ್ಗದಬ್ಬಾಳಿಕೆಯಿಂದ, ಎಂದರೆ ಜಮೀನ್ದಾರರು, ಜಾಗೀರುದಾರರು, ತಾಲ್ಲೂಕುದಾರರು, ಜೆನ್ಮಿಗಳು ಎಂದೆಲ್ಲ ಹೆಸರಾದ ಊಳಿಗಮಾನ್ಯ ಭೂಮಾಲೀಕರ ದಬ್ಬಾಳಿಕೆಯಿಂದ ಬಿಡುಗಡೆ ಪಡೆಯುವ ಆಸೆಯೂ ರೈತಜನಾಂಗಕ್ಕಿತ್ತು.

ಊಳಿಗಮಾನ್ಯ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ :

ಊಳಿಗಮಾನ್ಯ ಭೂಮಾಲೀಕ ಪದ್ಧತಿಯನ್ನು ನಿರ್ಮೂಲಗೊಳಿಸಿ, ಅವರಿಗೆ ಯಾವ ಪರಿಹಾರವನ್ನೂ ನೀಡದೆ, ಭೂಮಿಯನ್ನು ರೈತರಿಗೆ ವಿತರಣೆಮಾಡಬೇಕು ಎನ್ನುವುದು ಅಖಿಲ ಭಾರತ ಕಿಸಾನ್‌ಸಭೆಯ ಪ್ರಮುಖ ಬೇಡಿಕೆಯಾಗಿತ್ತು. ಇದು ವಿದೇಶಿ ಆಳ್ವಿಕೆಯಿಂದ ಬಿಡುಗಡೆ ಪಡೆಯಬೇಕು ಎನ್ನುವ ಬೇಡಿಕೆಯಷ್ಟೇ ಮುಖ್ಯವಾದ್ದಾಗಿತ್ತು. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಖಿಲಭಾರತ ಕಿಸಾನ್ ಸಭೆಯು ಪ್ರತಿನಿಧಿಸಿದ ಚಳುವಳಿಯು ಸಾಮ್ರಾಜ್ಯಶಾಹಿ ವಿರೋಧಿಯಾಗಿ ಮತ್ತು ಊಳಿಗಮಾನ್ಯ ವಿರೋಧಿಯಾಗಿ ಇತ್ತು.

ಅಖಿಲಭಾರತ ಕಿಸಾನ್ ಸಭೆಯ ಇನ್ನೊಂದು ವಿಶಿಷ್ಟ ಅಂಶವೆಂದರೆ, ಸಾಮ್ರಾಜ್ಯಶಾಹಿ ಮತ್ತು ಊಳಿಗಮಾನ್ಯತೆಯ ಬಗ್ಗೆ ಅದಕ್ಕೆ ರಾಜಿಗೆ ಮಣಿಯದ ನಿಲುವು ಇದ್ದುದರಿಂದ, ಸ್ವಾತಂತ್ರ್ಯ ಚಳುವಳಿಯ ಬೂರ್ಜ್ವಾ ನಾಯಕತ್ವಕ್ಕೂ ಅದಕ್ಕೂ ಅನಿವಾರ್ಯವಾದ ಸಂಘರ್ಷ ಒದಗಿತು. ಸಂಘಟಿತ ಕಿಸಾನ್‌ಸಭೆಯ ಉದಯ ಮತ್ತು ಸಾಮ್ರಾಜ್ಯಶಾಹಿ, ಊಳಿಗಮಾನ್ಯತೆಗಳ ಬಗ್ಗೆ ಅದಕ್ಕಿದ್ದ ಜಗ್ಗದ ನಿಲುವುಗಳು, ಬೂರ್ಜ್ವಾ ನೇತೃತ್ವದ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಮಹಾತ್ಮಾಗಾಂಧಿ ಮತ್ತು ಇತರ ನಾಯಕರ ಕೋಪವನ್ನು ಕೆರಳಿಸಿದವು. ಕಿಸಾನ್ ಸಭೆಯು ಅಖಿಲಭಾರತ ಸಂಘಟನೆಯಾಗಿ ರೂಪುಗೊಳ್ಳುವ ಮೊದಲೇ, ಅದು ನಡೆಸಿದ್ದ ಕೆಲವು ಚಟುವಟಿಕೆಗಳು ದೇಶದಲ್ಲಿ ಎಚ್ಚರಿಕೆಯ ಕೂಗೆಬ್ಬಿಸಿದವು. "ಹಿಂಸೆಯ ವಾತಾವರಣ" ದೇಶದಲ್ಲಿ ಬೆಳೆಯುತ್ತಿದೆ ಎಂಬ ಮಹಾತ್ಮಾಗಾಂಧಿಯವರ ಮಾತಿನಲ್ಲಿ ಅದು ವ್ಯಕ್ತವಾಯಿತು. ನಾಯಕತ್ವದ ರಾಜಿಗೆ ಮಣಿಯುವ ನೀತಿ ಮತ್ತು ಕಿಸಾನ್ ಸಭೆಯ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಊಳಿಗಮಾನ್ಯ ವಿರೋಧಿಯಾದ ರಾಜಿಗೆ ಮಣಿಯದ ನಿಲುವುಗಳ ನಡುವೆ ಒಂದು ಮೂಲಭೂತ ಸಂಘರ್ಷ ಇಲ್ಲಿತ್ತು.

ದೇಶದ ರೈತಜನಾಂಗದ ಬಹುಸಂಖ್ಯೆಯು ಇನ್ನೂ ಬೂರ್ಜ್ವಾವರ್ಗದ ಪ್ರಭಾವದಲ್ಲೇ ಇತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ಭಾರತದ ರಾಷ್ಟ್ರೀಯ ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಇತರ ರಾಜಕೀಯ ಪಕ್ಷಗಳು ಮತ್ತು ಚಳುವಳಿಗಳ ಬೆನ್ನ ಹಿಂದೆ ರೈತಜನಾಂಗವೂ ಸೇರಿದಂತೆ ಭಾರತದ ಇಡೀ ಜನತೆ ಇತ್ತು. ರೈತಜನಾಂಗದ ಒಂದು ಸಣ್ಣ ಸಂಖ್ಯೆಯ ಆಶಯಗಳನ್ನು ಮಾತ್ರ ಕಿಸಾನ್‌ಸಭೆ ಪ್ರತಿಬಿಂಬಿಸಿತ್ತು. ಆದರೆ ಒಂದು ಸಣ್ಣ ಸಂಖ್ಯೆಯಲ್ಲಾದರೂ ಸಹ, ರೈತರು ಬೂರ್ಜ್ವಾ ನಾಯಕತ್ವವನ್ನು ತ್ಯಜಿಸಿ, ತಾವೇ ಒಂದು ಸ್ವತಂತ್ರವರ್ಗವಾಗಿ ಸಂಘಟಿತರಾಗಿದ್ದುಕೊಂಡು, ಅದೇ ವೇಳೆಗೆ ಬೂರ್ಜ್ವಾ ವರ್ಗವು ನಾಯಕತ್ವ ವಹಿಸಿದ್ದ ಸಂಘಟನೆ ಮತ್ತು ಚಳುವಳಿಯಿಂದ ಬೇರ್ಪಡದೆ ಇದ್ದದ್ದು ತುಂಬ ವಿಶಿಷ್ಟತೆಯನ್ನುಳ್ಳದ್ದಾಗಿದೆ.

ಅಖಿಲಭಾರತ ಕಿಸಾನ್‌ಸಭೆಯ ಪ್ರಭಾವ :

ಭಾರತೀಯ ರೈತಜನಾಂಗದ ಅಲ್ಪ ಸಂಖ್ಯೆಯನ್ನು ಮಾತ್ರ ಕಿಸಾನ್‌ಸಭೆಯು ಪ್ರತಿನಿಧಿಸಿದ್ದರೂ ಕೂಡ, ಅದು ಯಾವ ಆಶಯಗಳಿಗೆ ಅಭಿವ್ಯಕ್ತಿ ನೀಡಲು ಪ್ರಯತ್ನಿಸುತ್ತಿತ್ತೋ ಆ ಆಶಯಗಳು, ಗ್ರಾಮೀಣ ಪ್ರದೇಶಗಳ ಜನತೆಯನ್ನೂ ಆವರಿಸಿದ್ದವು. ಸ್ವಾತಂತ್ರ್ಯ ಚಳುವಳಿಯನ್ನು ನಡೆಸುತ್ತಿದ್ದ ಬೂರ್ಜ್ವಾ ನಾಯಕತ್ವದ ಸಿದ್ಧಾಂತ ಮತ್ತು ಕಾರ್ಯಕ್ರಮಗಳಲ್ಲಿ ಕೂಡ ಅದು ಪ್ರತಿಬಿಂಬಿತವಾಯಿತು.

ಅಖಿಲಭಾರತ ಕಿಸಾನ್‌ಸಭೆಯು ರಚನೆಯಾಗುವುದಕ್ಕೆ ಬಹುಕಾಲ ಮುಂಚೆಯೇ, ಭಾರತ ರಾಷ್ಟ್ರೀಯ ಕಾಂಗ್ರೆಸ್ಸು 1931ರ ತನ್ನ ಕರಾಚಿ ಅಧಿವೇಶನದಲ್ಲಿ, ಕಾರ್ಮಿಕವರ್ಗದ, ರೈತಜನಾಂಗದ, ಮತ್ತು ದುಡಿಯುವ ಇತರ ವರ್ಗಗಳ ಆಶಯಗಳನ್ನು ಪ್ರತಿನಿಧಿಸುವ ಒಂದು ಸಾಮಾಜಿಕ–ಆರ್ಥಿಕ ಕಾರ್ಯಕ್ರಮವನ್ನು ಅಂಗೀಕರಿಸಿತ್ತು.

ಅಖಿಲಭಾರತ ಕಿಸಾನ್‌ಸಭೆ ರಚನೆಯಾಗುವ ಕಾಲದಲ್ಲಿಯೇ ಕಾಂಗ್ರೆಸ್ಸಿನ ಲಕ್ನೋ ಅಧಿವೇಶನದಲ್ಲಿ, ಅದರ ಅಧ್ಯಕ್ಷರಾದ ಜವಹರಲಾಲ್ ನೆಹರು ಅವರು, ಕಾರ್ಮಿಕವರ್ಗದ ಮತ್ತು ರೈತ ಸಂಘಟನೆಗಳ ಹಿಂದೆ ಇರುವ ಭಾವನೆಗಳಿಗೆ ಮಾತುಕೊಟ್ಟಿದ್ದರು. ಅಲ್ಲದೆ, ಕಾರ್ಮಿಕರು ಮತ್ತು ರೈತರ ಸಂಘಟನೆಗಳೂ ಸೇರಿದಂತೆ ಎಲ್ಲ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಐಕ್ಯರಂಗವೊಂದನ್ನು ಸ್ಥಾಪಿಸಲು ಅವರು ಕರೆಯಿತ್ತರು. ಇವೆಲ್ಲವೂ ಕಾಂಗ್ರೆಸ್ಸಿನ ಜೊತೆಯೇ ಸಾಮೂಹಿಕವಾಗಿ ಸೇರ್ಪಡೆಗೊಳ್ಳುವ ಸಲಹೆಯನ್ನು ಮುಂದಿಟ್ಟಿದ್ದರು.

ಒಂದು ವರ್ಷದ ನಂತರ, ಕಾಂಗ್ರೆಸ್ಸಿನ ಫೈಜ್‌ಪುರ್ ಅಧಿವೇಶನದಲ್ಲಿ, ಇನ್ನೂ ಹೆಚ್ಚು ವೈಚಾರಿಕವಾದ ಮತ್ತು ಹೆಚ್ಚು ಸಮಗ್ರವಾದ ಒಂದು ಕೃಷಿಕಾರ್ಯಕ್ರಮವನ್ನು ಅಂಗೀಕರಿಸಲಾಯಿತು.

ಫೈಜ್‌ಪುರ್ ಕಾಂಗ್ರೆಸ್ ಅಧಿವೇಶನವಾದ ನಂತರವೇ ನಡೆಸಲ್ಪಟ್ಟ ಪ್ರಾದೇಶಿಕ ಅಸೆಂಬ್ಲಿ ಚುನಾವಣೆಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ವೈಚಾರಿಕ ಕಾರ್ಯಕ್ರಮ ಮತ್ತು ಹೊಸ ಕೃಷಿ ಕಾರ್ಯಕ್ರಮಗಳೆರಡನ್ನೂ ಅಪಾರವಾಗಿ ಜನಪ್ರಿಯಗೊಳಿಸುವ ಅವಕಾಶ ಬಂದಿತು. ಚುನಾವಣೆಗಳ ನಂತರ ರಚಿತವಾದ ಕಾಂಗ್ರೆಸ್ ಸರ್ಕಾರಗಳು, ತಮ್ಮ ಪಕ್ಷ ಅಂಗೀಕರಿಸಿದ್ದ ಕಾರ್ಯಕ್ರಮಾತ್ಮಕ ಗೊತ್ತುವಳಿಗಳಲ್ಲಿದ್ದ ವೈಚಾರಿಕ ಬೇಡಿಕೆಗಳಿಗೆ ಶಾಸನರೂಪವನ್ನು ಕೊಡುವ ಪ್ರಥಮ ಪ್ರಯತ್ನಗಳನ್ನು ನಡೆಸಿದವು. ಕಾಂಗ್ರೆಸ್ಸೇತರ ಸರ್ಕಾರಗಳಲ್ಲೊಂದಾದ ಹಳೆಯ ಸಂಯುಕ್ತ ಬಂಗಾಳದ ಫಜ್ಲುಲ್‌ಹಕ್ ಸರ್ಕಾರವೂ ಜಮೀನ್ದಾರಿ ವಿರೋಧಿ ಮತ್ತು ರೈತಪರವಾದ ನಿಲುವನ್ನೂ ಅಂಗೀಕರಿಸಿತು.

ಇವೆಲ್ಲವೂ ರೈತ ಜನತೆಯಲ್ಲಿ ಬೆಳೆಯುತ್ತಿದ್ದ ರಾಜಕೀಯ ಪ್ರಜ್ಞೆಯ ಫಲವಾಗಿದ್ದ ಹಾಗೆಯೇ, ಇದರ ಜೊತೆಗೆ, ರೈತ ಜನಾಂಗವನ್ನು ಹೆಚ್ಚು ವೈಚಾರಿಕ

(5ನೇ ಪುಟ ನೋಡಿ)

(4ನೇ ಪುಟದಿಂದ)

ಗೊಳಿಸಿ ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವ ಕಾರ್ಯ ಇನ್ನೂ ಹೆಚ್ಚು ಭರದಿಂದ ಸಾಗಿತು. ರಾಜ್ಯ ಸರ್ಕಾರಗಳು ರೈತಜನಾಂಗದ ಆಶಯಗಳನ್ನು ಈಡೇರಿಸುವ ಶಾಸನಕ್ರಮಗಳನ್ನು ಅಂಗೀಕರಿಸುವ ಹಾಗೆ, ಜನತೆಯಲ್ಲಿದ್ದ ಹೊಸ ರಾಜಕೀಯ ಪ್ರಜ್ಞೆಯನ್ನು ಕ್ರೋಢೀಕರಿಸುವ ಕೆಲಸವನ್ನು ಅಖಿಲ ಭಾರತ ಕಿಸಾನ್‌ಸಭೆ ಅನೇಕ ರಾಜ್ಯಗಳಲ್ಲಿ ನಡೆಸಿತು.

ಈ ಕ್ರಮವು ಯುದ್ಧದ ಆರಂಭದಿಂದ ಮತ್ತು ಪ್ರಾದೇಶಿಕ ಮಂತ್ರಿಮಂಡಲಗಳ ವಿಸರ್ಜನೆಗಳಿಂದ ತೊಂದರೆಗೀಡಾದ್ದರಿಂದ, ಇಂಥ ಪ್ರಯತ್ನಗಳನ್ನು ಯಶಸ್ವಿಯಾಗಿ ಮುಂದುವರಿಸಲು ಸಾಧ್ಯವಾಗಲಿಲ್ಲ. ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಎರಡು ವರ್ಷಗಳ ಕಾಲ ಆಡಳಿತೆ ನಡೆಸಿದ್ದರಿಂದ ತುಂಬಾ ಪ್ರಭಾವವನ್ನು ಬೀರಿದವು. ದೇಶದ ಹಲವಾರು ಭಾಗಗಳಲ್ಲಿ ಕಿಸಾನ್‌ಸಭೆಯು ಆಳವಾಗಿ ಬೇರುಬಿಟ್ಟಿತು. ಕಿಸಾನ್‌ಸಭೆ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಎಡ ವಿಭಾಗವೂ ಸೇರಿದಂತೆ, ವಾಮವಾದಿ ರಾಜಕೀಯ ಪಕ್ಷಗಳ ನಡುವೆ ಸಹಕಾರ ಬೆಳೆಯಿತು. ಸ್ವಾತಂತ್ರ್ಯ ಹೋರಾಟದ ವಿಶಾಲ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಎಡ ವಿಚಾರದ ಸ್ವರೂಪವು ಕಿಸಾನ್‌ಸಭೆಯ ಬೆಳವಣಿಗೆಗೆ ಸಹಾಯ ಮಾಡಿತು. ಕಿಸಾನ್‌ಸಭೆಯು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ಬಲಪಡಿಸಿತು. ಆದ್ದರಿಂದ ಹೆಚ್ಚು ಬಲಯುಕ್ತವಾಗಿದ್ದ ಕಾಂಗ್ರೆಸ್ ಮತ್ತು (ಕಿಸಾನ್‌ಸಭೆಯೂ ಸೇರಿದಂತೆ) ಹೆಚ್ಚು ಬಲಯುತವಾದ ದುಡಿಯುವ ಜನತೆಯ ಹೋರಾಟದ ಸಂಘಟನೆ ಇವೆರಡೂ ಯುದ್ಧದ ಆರಂಭದಲ್ಲಿ, ಸಾಮ್ರಾಜ್ಯಶಾಹಿಯ ಸವಾಲನ್ನು ಎದುರಿಸುವಂತಾಯಿತು.

ಆಗ "ಬ್ರಿಟಿಷ್ ಇಂಡಿಯಾ ಪ್ರದೇಶಗಳು" ಎಂದು ಹೆಸರಾಗಿದ್ದ ಪ್ರದೇಶಗಳಿಗೆ ಮಾತ್ರ ಈ ಬೆಳವಣಿಗೆಗಳು ಸೀಮಿತವಾಗಿರಲಿಲ್ಲ. "ಮಹಾರಾಜರ ಇಂಡಿಯಾ" ಕೂಡ ಕಾರ್ಯೋನ್ಮುಖವಾಯಿತು. ಭಾರತದ ಸುಮಾರು 600 ಸಂಸ್ಥಾನಗಳಲ್ಲಿ ಪ್ರತಿಯೊಂದರಲ್ಲೂ ಜವಾಬ್ದಾರಿ ಸರ್ಕಾರದ ಬೇಡಿಕೆಯು ಎದ್ದಿತು. ದುಡಿಯುವ ಜನತೆಯ ಇತರ ವರ್ಗಗಳ ಜೊತೆ, ಈ ಹೊಸ ಪ್ರಜಾಪ್ರಭುತ್ವವಾದಿ ಆಂದೋಲನವು ಲಕ್ಷಾಂತರ ರೈತರನ್ನೂ ಕಾರ್ಯೋನ್ಮುಖರಾಗುವಂತೆ ಮಾಡಿದ್ದು ಸಹಜವೇ ಆಗಿದೆ.

ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಅಂಗವಾಗಿ ಏಳುತ್ತಿದ್ದ ರಾಜ್ಯ ಜನತೆಗಳ ಚಳುವಳಿಯು, ಸ್ವಾತಂತ್ರ್ಯ ಸಂಗ್ರಾಮದ ಎಡಪಂಥೀಯರ ಪ್ರಭಾವಕ್ಕೆ ಸಿಕ್ಕಿತು. "ಬ್ರಿಟಿಷ್ ಇಂಡಿಯಾ"ದಲ್ಲಿ ಬೆಳೆದಂತೆ ಅಲ್ಲದಿದ್ದರೂ, ತಿರುವನಂತಪುರ, ಕೊಚ್ಚಿನ್ ಮತ್ತು ಹೈದರಾಬಾದ್‌ಗಳಲ್ಲಿ ಕಿಸಾನ್‌ಸಭೆ ಬೆಳೆಯಿತು. ಹೀಗಾಗಿ, ಸಮಗ್ರ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿ ಮತ್ತು ಅದರ ಅಂಗವಾಗಿ ಅಖಿಲಭಾರತ ಕಿಸಾನ್ ಚಳುವಳಿಗಳಿಗೆ ವೇದಿಕೆಯು ಸಿದ್ಧವಾದಂತಾಯಿತು.

ಐಕ್ಯತೆಯಲ್ಲಿ ಒಡಕು :

ಯುದ್ಧದ ಆರಂಭ ಮತ್ತು ಅದರ ಬೆನ್ನಲ್ಲಿ ಬಂದ ದಬ್ಬಾಳಿಕೆಗಳು, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗೆ, ಅದರಲ್ಲೂ ಕಿಸಾನ್ ಚಳುವಳಿಗೆ ಒಂದು ವಿಧದಲ್ಲಿ ಪೆಟ್ಟು ಕೊಟ್ಟವು. ಬ್ರಿಟಿಷ್ ಸರ್ಕಾರವು ಅಮಾನುಷ ದಬ್ಬಾಳಿಕೆ ನಡೆಸಿತು.

ಇದರ ಪರಿಣಾಮವಾಗಿ ಪ್ರಜಾಪ್ರಭುತ್ವ ಚಳುವಳಿಯ ಸ್ವತಂತ್ರ ಬೆಳವಣಿಗೆಗೆ ಅಡ್ಡಿಯಾಯಿತು. ವಿನಾಶಕಾರಿ ಶಕ್ತಿಗಳು ತಲೆಎತ್ತಿ ಚಳುವಳಿಯ ಪ್ರಗತಿಯನ್ನು ತಡೆದವು.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಒಂದು ಸಬಲ ಸವಾಲಾಗಿ ಮುಸ್ಲಿಂ ಲೀಗ್ ಹುಟ್ಟಿಕೊಂಡು, ಇಡೀ ಪ್ರಜಾಸತ್ತಾತ್ಮಕ ಚಳುವಳಿಗೆ ಮತ್ತು ಕಿಸಾನ್ ಚಳುವಳಿಗೆ ಒಂದು ಒಡಕಿನ ಮೂಲವಾಗಿ ಪರಿಣಮಿಸಿತು. ಮುಂದೆ ಪಾಕಿಸ್ತಾನ ಎನ್ನಿಸಿಕೊಂಡ "ಮುಸ್ಲಿಂ ಬಹುಸಂಖ್ಯಾತರನ್ನುಳ್ಳ ಈಶಾನ್ಯ ಮತ್ತು ವಾಯುವ್ಯ ಭಾರತದ ಪ್ರದೇಶಗಳನ್ನು" ಬೇರ್ಪಡಿಸಬೇಕೆಂಬ ಉಗ್ರ ಕರೆಯಿಂದ ಯುದ್ಧಕ್ಕೆ ಮುಂಚಿನ ವರ್ಷಗಳಲ್ಲಿ ಬೆಳೆದಿದ್ದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಐಕ್ಯತೆಯು ಒಡೆಯಿತು. 1940ರಲ್ಲಿ ಲಾಹೋರಿನಲ್ಲಿ ನಡೆದ ಲೀಗಿನ ಅಧಿವೇಶನವು ಯುದ್ಧಕ್ಕೆ ಹಿಂದೆ ಬೆಳೆದಿದ್ದ ಐಕ್ಯ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಭಾರತವನ್ನೂ ಯುದ್ಧಕಾಲದಲ್ಲಿ ಮತ್ತು ಯುದ್ಧಾನಂತರ ಭಾರತದಲ್ಲಿ ಕಾಂಗ್ರೆಸ್ ಮತ್ತು ಲೀಗಿನ ನಡುವೆ ಕಟುಹೋರಾಟದ ಭಾರತವನ್ನೂ ವಿಭಜಿಸುವ ಚಾರಿತ್ರಿಕ ಚಿಹ್ನೆಯಾಗಿದೆ.

ಈ ನಡುವೆ, ಯುದ್ಧದ ಬಗ್ಗೆ ಮತ್ತು ಯುದ್ಧ ಪರಿಸ್ಥಿತಿಯನ್ನು ಎದುರಿಸಬೇಕಾದ ವಿಧಾನಗಳ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳು ಬಂದದ್ದರಿಂದ ಕಿಸಾನ್‌ಸಭೆ, ಟ್ರೇಡ್ ಯೂನಿಯನ್ ಮತ್ತಿತರ ಸಾಮೂಹಿಕ ಸಂಘಟನೆಗಳು ಒಡೆದವು.

ನಮಗೆ ಅನಾನುಕೂಲಕರ ಲಕ್ಷಣಗಳಿದ್ದ ಈ ಪರಿಸ್ಥಿತಿಯಲ್ಲೂ ಒಂದು ವೈಶಿಷ್ಟ್ಯವೇನೆಂದರೆ ಜನತೆಯ ರಾಜಕೀಯ ಪ್ರಜ್ಞೆಯು ಅತಿವೇಗದಲ್ಲಿ ಬೆಳೆದು, ಇದುವರೆಗೆ ನಿದ್ರಿಸುತ್ತಿದ್ದ ಜನತೆ ಒಂದಲ್ಲ ಒಂದು ರಾಜಕೀಯ ಚಳುವಳಿಯ ಕಡೆಗೆ ಸೆಳೆಯಲ್ಪಟ್ಟುದು. ಯುದ್ಧಾನಂತರದ ಭಾರತ, ಯುದ್ಧಪೂರ್ವ ಭಾರತವಿದ್ದ ಹಾಗೆ ಇರಲು ಸಾಧ್ಯವಿಲ್ಲವೆಂಬುದು ಅನಿವಾರ್ಯವಾಗಿತ್ತು.

ಹೊಸ ಆಂದೋಲನ :

ಯುದ್ಧ ಮುಗಿದಾಗ ಒಂದು ಹೊಸ ರಾಜಕೀಯ ಆಂದೋಲನವು ಇಡೀ ದೇಶವನ್ನು ವ್ಯಾಪಿಸಿತು. ಇನ್ನು ತಡ ಮಾಡದೆ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕೆಂದು ಒತ್ತಾಯಿಸಿ ಲಕ್ಷಾಂತರ ಜನರು ರಾಜಕೀಯಕ್ಕೆ ಇಳಿದರು. ಕಾರ್ಮಿಕವರ್ಗ, ರೈತಜನಾಂಗ ಮತ್ತಿತರ ಸಾಮೂಹಿಕ ಚಳುವಳಿಗಳು ಹಿಂದೆಂದೂ ಇಲ್ಲದಷ್ಟು ಬಲವಾದವು. ಪ್ರತಿಯೊಂದೂ ತನ್ನದೇ ಆದ ಘೋಷಣೆಗಳು ಮತ್ತು ಬೇಡಿಕೆಗಳೊಂದಿಗೆ ಹೋರಾಡಿದರೂ, "ಬ್ರಿಟಿಷರು ಭಾರತ ಬಿಟ್ಟು ತೊಲಗಲಿ" ಭಾರತದ ಮಹಾರಾಜರು ಜವಾಬ್ದಾರಿ ಸರ್ಕಾರ ರಚಿಸಲಿ" "ಸ್ವತಂತ್ರ ಭಾರತಕ್ಕೆ ಒಂದು ಗಣರಾಜ್ಯ ಪ್ರಜಾಸತ್ತಾತ್ಮಕ ಸಂವಿಧಾನವಿರಲಿ" ಮುಂತಾದ ಸಮಾನ ಬೇಡಿಕೆಗಳಲ್ಲಿ ಅವರೆಲ್ಲರೂ ಸೇರಿಕೊಂಡರು.

ಕಾಂಗ್ರೆಸ್ ಮತ್ತು ಲೀಗಿನ ನೇತೃತ್ವದಲ್ಲಿದ್ದ ಜನತೆಯ ಮಧ್ಯೆ ಒಡಕು ಮುಂದುವರೆದರೂ, ಯುದ್ಧದ ಪ್ರಶ್ನೆಯ ಬಗ್ಗೆ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯೊಳಗೆ ಎದ್ದಿದ್ದ ಭಿನ್ನಾಭಿಪ್ರಾಯವು ಪರಿಹಾರವಾಯಿತು. ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಅವರ ಜೊತೆಗಾರರಾದ ಭಾರತೀಯ ಮಹಾರಾಜರ ವಿರುದ್ಧ ಒಂದು ಐಕ್ಯ ತೀವ್ರ ಹೋರಾಟ ಆರಂಭವಾಯಿತು. ಕಾರ್ಮಿಕವರ್ಗದ ಮತ್ತು (ಸರ್ಕಾರಿ ಉದ್ಯೋಗಿಗಳೂ ಸೇರಿದಂತೆ) ಮಧ್ಯಮವರ್ಗದ ಉದ್ಯೋಗಿಗಳ ಮುಷ್ಕರ ಚಳುವಳಿ, ಭಾರತೀಯ ರಾಷ್ಟ್ರೀಯ ಸೇನೆಯ ಕೈದಿಗಳ ವಿಚಾರಣೆಯನ್ನು ಕೈಬಿಡುವಂತೆ ಒತ್ತಾಯಿಸುವ ಲಕ್ಷಾಂತರ ಮಂದಿಯ ಸಾಮ್ರಾಜ್ಯಶಾಹಿ ಪ್ರತಿಭಟನಾ ಪ್ರದರ್ಶನಗಳು, ಜವಾಬ್ದಾರಿ ಸರ್ಕಾರವನ್ನು ರಚಿಸುವಂತೆ ಪ್ರತಿ ಮಹಾರಾಜರ ಸಂಸ್ಥಾನದಲ್ಲೂ ನಡೆದ ಸಬಲ ಚಳುವಳಿಗಳು, ಎಲ್ಲ ರೀತಿಯ ದಬ್ಬಾಳಿಕೆಗಳ ವಿರುದ್ಧ ನಡೆದ ರೈತ ಹೋರಾಟಗಳು-ಇವೆಲ್ಲವೂ ದೇಶದಾದ್ಯಂತ ಬೆಳೆದವು. ಇವೆಲ್ಲಕ್ಕಿಂತ ತುಂಬ ವಿಶಿಷ್ಟವಾದದ್ದೆಂದರೆ, ಬ್ರಿಟಿಷ್ ಸರ್ಕಾರದ ಸಶಸ್ತ್ರ ಪಡೆಗಳಲ್ಲಿ ಒಂದು ಭಾಗವಾಗಿದ್ದ ರಾಯಲ್ ಇಂಡಿಯನ್ ನೇವಿಯ ಸಿಬ್ಬಂದಿಯು (ನಾವಿಕರು) ದಂಗೆ ಎದ್ದದ್ದು. ಇವೆಲ್ಲವೂ, ಬ್ರಿಟಿಷರು ಇನ್ನು ಎಷ್ಟು ಕಾಲ ಭಾರತದಲ್ಲಿರುತ್ತಾರೋ ಅಷ್ಟೂ ಅವರಿಗೇ ಅಪಾಯ ಎಂಬ ಸೂಚನೆಯನ್ನು ಕೊಟ್ಟವು.

ಈ ದೇಶದಾದ್ಯಂತ ನಡೆದ ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನದಲ್ಲಿ ರೈತಜನಾಂಗವು ವಹಿಸಿದ ಪಾತ್ರವು ಐತಿಹಾಸಿಕವಾದುದು. ಕಿಸಾನ್‌ಸಭೆ ನಡೆಸಿದ ದಶಕದ ಹೋರಾಟಗಳಿಂದ ಮತ್ತು ಅದು ಕಟ್ಟಿದ ಸಂಘಟನೆಯಿಂದ, ಕಿಸಾನ್‌ಸಭೆಯ ಘಟಕಗಳು, ಸಂಯುಕ್ತ ಬಂಗಾಳ, ಆಂಧ್ರ ಮತ್ತು ಮಲಬಾರ್ ಮದರಾಸಿನ ಪ್ರದೇಶಗಳು, ತಿರುವನಂತಪುರ, ಹೈದರಾಬಾದ್, ಮಹಾರಾಷ್ಟ್ರದ ವಾರಲಿ ಪ್ರದೇಶ ಮುಂತಾದ ಎಡೆಗಳಲ್ಲಿ ಭೂಹೀನರ ಮತ್ತು ಕೃಷಿಕ ಗ್ರಾಮೀಣ ಜನತೆಯ ಚಳುವಳಿಗಳು ಮತ್ತು ಹೋರಾಟಗಳನ್ನು ಸಂಘಟಿಸಿ ಅವುಗಳ ನೇತೃತ್ವ ವಹಿಸಲು ಸಾಧ್ಯವಾಯಿತು. ಬಂಗಾಳದ ತೆಭಾಗ ಚಳುವಳಿ, ಮಲಬಾರ್ ಮತ್ತು ಆಂಧ್ರಗಳ ರೈತ ಹೋರಾಟಗಳು, ಮಹಾರಾಷ್ಟ್ರದ ವಾರಲಿ ಚಳುವಳಿ, ತಿರುವನಂತಪುರದ ಪುನ್ನಪ್ರ-ವಯಲಾರ್ ಹೋರಾಟ ಮತ್ತು ಇವೆಲ್ಲಕ್ಕೆ ಶಿಖರಪ್ರಾಯವಾಗಿರುವ ಹೈದರಾಬಾದಿನ ತೆಲಂಗಾಣ ಹೋರಾಟ ಇವೆಲ್ಲವೂ (ಕೆಲವು ಪ್ರದೇಶಗಳಲ್ಲಿಯಾದರೂ) ರೈತಜನಾಂಗವು ಸ್ವತಂತ್ರವಾಗಿ ವರ್ತಿಸುವ ಒಂದು ಕ್ರಾಂತಿಕಾರಿ ಶಕ್ತಿಯಾಗಿ ಬೆಳೆದಿದೆ, ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಜೊತೆ ಪೂರ್ಣ ಸಹಕಾರದಲ್ಲಿ ಇದೆ ಎಂಬುದನ್ನು ತೋರಿಸಿದವು.

ಬೂರ್ಜ್ವಾನಾಯಕತ್ವದ ಪಾತ್ರ :

ಸಾಮ್ರಾಜ್ಯಶಾಹಿಯ ಜೊತೆಗಿನ ತನ್ನ ವ್ಯವಹಾರಗಳಲ್ಲಿ, ರೈತಜನಾಂಗದ ಈ ಎಲ್ಲ ಹೋರಾಟಗಳನ್ನು, ಕಾರ್ಮಿಕವರ್ಗದ ಮತ್ತು ಇತರ ದುಡಿಯುವ ವರ್ಗಗಳ ಚಳುವಳಿಗಳನ್ನು ಬಳಸಿಕೊಳ್ಳುವ ಬುದ್ಧಿವಂತಿಕೆಯು ಸ್ವಾತಂತ್ರ್ಯ ಚಳುವಳಿಯ ಬೂರ್ಜ್ವಾ ನಾಯಕತ್ವಕ್ಕೆ ಇತ್ತು. ಆದರೆ ಈ ಹೋರಾಟಗಳಿಂದ ಸೂಚಿತವಾದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಕ್ರಾಂತಿಕಾರಿ ಕಾವು ಮಾತ್ರ ಆ ನಾಯಕತ್ವವನ್ನು ಚಿಂತೆಗೀಡುಮಾಡಿತು.

ಈ ಹೋರಾಟಗಳಿಂದ ಪ್ರತಿನಿಧಿತವಾದ ಪ್ರವೃತ್ತಿಯನ್ನು ಮತ್ತಷ್ಟು ಬೆಳೆಯಗೊಡಬಾರದೆಂಬ ವಿಚಾರದಲ್ಲಿ ಮಾತ್ರ (ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ) ರಾಷ್ಟ್ರೀಯ ನಾಯಕರು ಬ್ರಿಟಿಷ್‌ದೊರೆಗಳ ಜೊತೆ ಒಮ್ಮತದಲ್ಲಿದ್ದರು. ಹಾಗೆನೇ ವಿದೇಶಿ ಆಡಳಿತಗಾರರು ಮತ್ತು ಭಾರತೀಯ ಬೂರ್ಜ್ವಾವರ್ಗದ ನಡುವೆಯೂ ಮತ್ತು ಬೂರ್ಜ್ವಾವರ್ಗದ ಎರಡು ಬಣಗಳಾದ ಕಾಂಗ್ರೆಸ್ ಮತ್ತು ಮುಸ್ಲಿಂಲೀಗಿನ ನಡುವೆಯೂ ಇದ್ದ ಕೊನೆಯಿರದ ಸಂಧಾನದ ಮಾತುಕತೆಗಳನ್ನು ಆದಷ್ಟು ಬೇಗ ಮುಗಿಸಬೇಕು ಎನ್ನುವ ವಿಚಾರದಲ್ಲೂ ಅವರೆಲ್ಲಾ ಒಂದಾಗಿದ್ದರು.

ಇದರ ಫಲವಾಗಿ ಭಾರತವನ್ನು ಮುಸ್ಲಿಂ ಬಹುಸಂಖ್ಯಾತ ಮತ್ತು ಮುಸ್ಲಿಮೇತರ ಬಹುಸಂಖ್ಯಾತ ಪ್ರದೇಶಗಳಾಗಿ ಒಡೆದು ಭಾರತೀಯ ಒಕ್ಕೂಟ ಮತ್ತು ಪಾಕಿಸ್ತಾನಗಳೆಂಬ ಸ್ವತಂತ್ರ ದೇಶಗಳನ್ನಾಗಿ ಮಾಡುವ ಆಧಾರದ ಮೇಲೆ ವಿದೇಶಿ ದೊರೆಗಳು ಮತ್ತು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ನಡುವೆ ರಾಜಿ ಆಯಿತು.

ಇಲ್ಲಿಗೆ, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ಇತರ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ಜೊತೆಗೂಡಿ ಅಖಿಲಭಾರತ ಕಿಸಾನ್‌ಸಭೆಯು ಹೂಡಿದ್ದ ಹೋರಾಟದ ಮೊದಲ ಘಟ್ಟ ಮುಗಿದು, ಹೊಸ ಘಟ್ಟ ಶುರುವಾಯಿತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಬೂರ್ಜ್ವಾ ನಾಯಕತ್ವವು ಮೊದಲಿಗೆ ಬ್ರಿಟಿಷ್‌ದೊರೆಗಳ ವಿರುದ್ಧದ ಹೋರಾಟದಲ್ಲಿ ಕಾರ್ಮಿಕವರ್ಗ, ರೈತಜನಾಂಗ ಮತ್ತು ಇತರ ದುಡಿಯುವ ವರ್ಗಗಳ ಜೊತೆಗಿತ್ತು. ಆದರೆ ಸಾಮಾಜಿಕ-ಆರ್ಥಿಕ ವಿಚಾರಗಳ ಹೋರಾಟಕ್ಕೆ ವಿರೋಧವಾಗಿತ್ತು. ಈಗ ಅದು ವಿರೋಧ ಪಕ್ಷಪಾತ್ರದಿಂದ ಆಡಳಿತ ಪಕ್ಷವಾಗಿ ಮಾರ್ಪಾಡು ಹೊಂದಿತು. ಕಾರ್ಮಿಕವರ್ಗದ ಹೋರಾಟ ಸಂಘಟನೆಗಳು, ಅವರ ಬೇಡಿಕೆಗಳು ಮತ್ತು ಹೋರಾಟಗಳ ಬಗ್ಗೆ ಅದಕ್ಕಿದ್ದ ವಿರೋಧವು ಈಗ ಚೆನ್ನಾಗಿ ಬೆಳಕಿಗೆ ಬಂತು. ಸ್ವಾತಂತ್ರ ಹೋರಾಟಕಾಲದಲ್ಲಿ, ಸಾಮಾಜಿಕ-ಆರ್ಥಿಕ ಸುಧಾರಣೆಗಳ ಬಗ್ಗೆ ಮತ್ತು ನಿರ್ಣಾಯಕ ಕೃಷಿ ಸುಧಾರಣೆಗಳ ಬಗ್ಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಂತೆ ಹೊಸ ಆಡಳಿತಗಾರರನ್ನು ಒತ್ತಾಯಿಸುವ ಕಾಲವು ಕಿಸಾನ್‌ಸಭೆಗೆ ಬಂದಿತು.

ಹೊಸ ಕಾರ್ಯವಿಧಾನ :

ಇದನ್ನು ಮಾಡಲು ಕಿಸಾನ್‌ಸಭೆ, ಟ್ರೇಡ್‌ಯೂನಿಯನ್ ಮುಂತಾದ ದುಡಿಯುವ ಜನತೆಯ ಇತರ ಸಂಘಟನೆಗಳಿಗೆ ಮತ್ತು ವಾಮವಾದಿ ರಾಜಕೀಯ ಪಕ್ಷಗಳಿಗೆ ಹೊಸ ಕಾರ್ಯವಿಧಾನ ಅಗತ್ಯವಾಯಿತು.

ಬ್ರಿಟಿಷ್ ದೊರೆಗಳಿಂದ ಅಧಿಕಾರ ವಹಿಸಿಕೊಂಡ ಹೊಸ ಸರ್ಕಾರಕ್ಕೆ ದ್ವಂದ್ವವಾದ, ವಿರೋಧಾಭಾಸದಿಂದ ಕೂಡಿದ ಸ್ವಭಾವವಿತ್ತು. ಒಂದು ಕಡೆ, ಸ್ವಾತಂತ್ರ್ಯಪೂರ್ವ ವರ್ಷಗಳಲ್ಲಿ ರೂಪುಗೊಂಡ ಎಡವಿಚಾರದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಮುಂದುವರಿಕೆಯೇ ಅದಾಗಿದ್ದು, ಕಿಸಾನ್ ಸಭೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಪ್ರಜಾಸತ್ತಾತ್ಮಕ ಚಳುವಳಿಯ ಇತರ ಅಂಗಗಳ ಜೊತೆ ಅನೇಕ ವಿಚಾರಗಳಲ್ಲಿ ಅದಕ್ಕೆ ಸಾಮ್ಯವಿತ್ತು. ವಿದೇಶಿ ದೊರೆಗಳ ವಿರುದ್ಧ ಮೊದಲು ಹೋರಾಡುತ್ತಿದ್ದುದರಿಂದ ಅದು ಸಾಮಾಜಿಕ-ಆರ್ಥಿಕ ವಿಚಾರಗಳಲ್ಲಿ ದುಡಿಯುವ ಜನತೆ ಮತ್ತವರ ಸಂಘಟನೆಗಳ ಜೊತೆ ರಾಜಿಗಳನ್ನು ಮಾಡಿಕೊಳ್ಳಬೇಕಾಗಿತ್ತು. ಆದರೆ ಈಗ ದೇಶದ ಆಡಳಿತಗಾರನಾಗಿದ್ದರಿಂದ ಅದು ಕಾರ್ಮಿಕ-ರೈತ ಜನತೆಯ ವಿರುದ್ಧ ನಿಂತಿತು.

ಹೀಗೆ ಹೊಸ ಆಡಳಿತಗಾರರು ದ್ವಂದ್ವ ಸ್ವಭಾವವನ್ನುಳ್ಳವರಾಗಿದ್ದರಿಂದ, ಅವರು ಅಂಗೀಕರಿಸುವ ಪ್ರತಿಯೊಂದು ಎಡ ವಿಚಾರದ ಘೋಷಣೆ ಮತ್ತು ಕ್ರಮಗಳ ಪ್ರಯೋಜನ ಪಡೆಯುತ್ತಾ ಅವರ ವರ್ಗನೀತಿಗಳ ವಿರುದ್ಧ ದೃಢ ಹೋರಾಟ ನಡೆಸುವಂಥ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವ ಅಗತ್ಯವು ಕಿಸಾನ್‌ಸಭೆ ಮತ್ತು ದುಡಿಯುವ ಜನತೆಯ ಇತರ ಸಂಘಟನೆಗಳಿಗೆ ಬಂದಿತು.

ಇಂಥ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲಾಯಿತೇ, ಎಷ್ಟರಮಟ್ಟಿಗೆ ಅದರ ವೈಫಲ್ಯಗಳು ದೌರ್ಬಲ್ಯಗಳೇನು ಎಂಬ ಪ್ರಶ್ನೆಗಳನ್ನು ಇಲ್ಲಿ ಪರಿಶೀಲಿಸಲು ಹೋಗುವುದಿಲ್ಲ. ಕಿಸಾನ್ ಸಭೆಯ ಚಟುವಟಿಕೆಗಳ ವಸ್ತುನಿಷ್ಠ, ಸ್ವವಿಮರ್ಶಾತ್ಮಕ ವಿಮರ್ಶೆಯು ಇದಕ್ಕೆ ಅಗತ್ಯವಿದೆ. ತನ್ನ ಹುಟ್ಟಿನ ದಿವಸದಿಂದ ಸ್ವಾತಂತ್ರ್ಯಗಳಿಕೆಯವರೆಗೆ ದಿನದಿನಕ್ಕೂ ಬಲಯುತವಾಗುತ್ತಿದ್ದ ಅಖಿಲಭಾರತ ಕಿಸಾನ್ ಸಭೆಯು, ಸ್ವಾತಂತ್ರ್ಯಾನಂತರದ ದಿವಸಗಳಲ್ಲಿ ಬೆಳವಣಿಗೆಯ ಅದೇ ಚಲನ ಗತಿಯನ್ನು ಯಾಕೆ ಉಳಿಸಿಕೊಳ್ಳಲಿಲ್ಲ ಎನ್ನುವುದು ಈ ಪರೀಕ್ಷೆಯಿಂದ ಮಾತ್ರ ತಿಳಿಯಲು ನಮಗೆ ಸಾಧ್ಯ.

ಹೊಸ ಸ್ಥಿತಿಗತಿಗಳು :

ಸಾಮ್ರಾಜ್ಯಶಾಹಿ ಮತ್ತು ಊಳಿಗಮಾನ್ಯತೆ ಎರಡನ್ನೂ ನಾಶಗೊಳಿಸುವ ಘೋಷಣೆಗಳೊಂದಿಗೆ ಹುಟ್ಟಿಕೊಂಡ ಎಂದರೆ ಸ್ವಾತಂತ್ರ್ಯ ಮತ್ತು ಪ್ರಜಾ

[6ನೇ ಪುಟ ನೋಡಿ]

ಪ್ರಜಾಪ್ರಭುತ್ವ, ರಾಷ್ಟ್ರೀಯ ಪ್ರಗತಿಗಾಗಿ ಭಾರತೀಯ ರೈತರ ಹೋರಾಟ

(5ನೇ ಪುಟದಿಂದ)

ಪ್ರಭುತ್ವಗಳ ಗಳಿಕೆಗಾಗಿ ಹೋರಾಟ ನಡೆಸುವುದು ಮತ್ತು ದುಡಿಯುವ ಜನತೆಯ ಸಾಮಾಜಿಕ-ಆರ್ಥಿಕ ವಿಮೋಚನೆಗಾಗಿ ಹೋರಾಟ ನಡೆಸುವುದು. ಹೀಗೆ ಎರಡೂ ಹೋರಾಟಗಳನ್ನು ಒಟ್ಟುಗೂಡಿಸಿದ ಕಿಸಾನ್ ಸಭೆಯು, ಹೊಸ ಸ್ಥಿತಿಗತಿಗಳಲ್ಲಿ ಅದನ್ನು ಮುಂದುವರೆಸಿತೇ ಎಂಬ ಪ್ರಶ್ನೆಯನ್ನು ಮಾತ್ರ ನಾವು ಹಾಕುತ್ತೇವೆ.

ಈ ಪ್ರಶ್ನೆಯ ಆಳವಾದ ಅಧ್ಯಯನವನ್ನು ಬೇರೆ ಸಂದರ್ಭದಲ್ಲಿ ನಡೆಸುವುದಕ್ಕೆ ಬಿಟ್ಟು, ದೇಶದ ಸದ್ಯದ ಸ್ಥಿತಿಗಳ ಬಗ್ಗೆ ಕೆಲವು ತೀರ್ಮಾನಗಳನ್ನು ಮಾಡಿ, ನಮ್ಮ ಮುಂದಿರುವ ಪರಿಸ್ಥಿತಿಯನ್ನು ಗಮನಿಸಬಹುದು. ಏಕೆಂದರೆ, ದೇಶದ ಇವತ್ತಿನ ರಾಜಕೀಯ ಪ್ರಶ್ನೆಯು ಸ್ವಾತಂತ್ರ್ಯ ಪೂರ್ವದ್ದಕ್ಕಿಂತಲೂ ಅಲ್ಲದೆ, ಸ್ವಾತಂತ್ರ್ಯ ಬಂದ 31 ವರ್ಷಗಳದ್ದಕ್ಕಿಂತಲೂ ತುಂಬಾ ಭಿನ್ನವಾಗಿದೆ. ಇವತ್ತಿನ ಪರಿಸ್ಥಿತಿಯ ಮುಖ್ಯ ಲಕ್ಷಣಗಳನ್ನು ನಾವು ಗಮನಿಸಬಹುದು.

ಮೊದಲನೆಯದಾಗಿ, ದೇಶವು ಸ್ವಾತಂತ್ರ್ಯ ಗಳಿಸಿ 32 ವರ್ಷಗಳಾದರೂ ಕೂಡ ದೇಶವು ಸಾವಿರವಿಧಗಳಲ್ಲಿ ಇನ್ನೂ ಸಾಮ್ರಾಜ್ಯಶಾಹಿಗೇ ಅಂಟಿಕೊಂಡಿದೆ. ಬಂಡವಾಳಶಾಹಿ ಜಗತ್ತಿನ ಒಂದು ಭಾಗವಾಗಿರುವುದರಿಂದ ಮತ್ತು ಭಾರತೀಯ ಬೂರ್ಜ್ವಾ ವರ್ಗ ಮತ್ತು ಭೂಮಾಲೀಕರ ಒಂದು ವರ್ಗ ಮಿಶ್ರವರ್ಗಗಳ ಆಡಳಿತ ನಡೆಸುತ್ತಿರುವುದರಿಂದ, ವಿದೇಶಿ ಏಕಸ್ವಾಮ್ಯಗಾರರೊಂದಿಗೆ ಸಹಕಾರದಿಂದಿರುವ ದೊಡ್ಡ ಬೂರ್ಜ್ವಾವರ್ಗವು ಈ ವರ್ಗ ಮಿಶ್ರಣದ ನೇತೃತ್ವ ವಹಿಸಿರುವುದರಿಂದ ನಮ್ಮ ದೇಶವು ಬಂಡವಾಳಶಾಹಿ ವಿಶ್ವ ಮಾರುಕಟ್ಟೆಗೆ ಹೆಚ್ಚು ಹೆಚ್ಚು ಅಂಟಿಕೊಳ್ಳುತ್ತಿದೆ. ಆದ್ದರಿಂದ ಸಾಮ್ರಾಜ್ಯಶಾಹಿ ಶೋಷಣೆಗೂ ಒಳಪಟ್ಟಿದೆ. ಭಾರತದ ವೈಯಕ್ತಿಕ ಏಕಸ್ವಾಮ್ಯ ಬಂಡವಾಳಶಾಹಿಗಳಿಗೂ ವಿದೇಶದ ವೈಯಕ್ತಿಕ ಬಹುರಾಷ್ಟ್ರೀಯ ಸಂಸ್ಥೆಗಳಿಗೂ ಇರುವ ನಂಟುತನಗಳು ತುಂಬ ಗಂಭೀರವಾದವು. ಕಾಂಗ್ರೆಸ್ ಆಡಳಿತ ಮತ್ತು ಜನತಾ ಆಡಳಿತಗಳೆರಡೂ ಸಮಾಜವಾದವನ್ನು ಬಾಯಿಮಾತಿನಲ್ಲಿ ಗೌರವಿಸಿದರೂ, ಈ ಎರಡೂ ಪಕ್ಷಗಳು ಅಧಿಕಾರದ ಅವಧಿಯಲ್ಲಿ ಇಂಥ ನಂಟುತನಗಳು ಇನ್ನೂ ಹೆಚ್ಚು ಬಲವಾಗುತ್ತಿವೆ. ಹೀಗಾಗಿ, ಭಾರತದ ರಾಷ್ಟ್ರೀಯ ನಾಯಕರು ದೇಶದ ಆಡಳಿತವನ್ನು ವಹಿಸಿಕೊಂಡ ತಕ್ಷಣ, ಕಿಸಾನ್‌ಸಭೆಯು ಸಾಮ್ರಾಜ್ಯಶಾಹಿ ವಿರೋಧಿ ನಿಲುವುಗಳು ಸಂಬಂಧವಿಲ್ಲದ ವಿಚಾರವೆಂದು ಭಾರತದ ಜನತೆಯ ಅನೇಕ ಭಾಗಕ್ಕೆ ಅನ್ನಿಸಿದರೂ ಇದು ಅಸಂಭದ್ಧವೇನೂ ಅಲ್ಲ. ಆದ್ದರಿಂದ, ಆಡಳಿತ ವಲಯಗಳು ಅನುಸರಿಸುವ ಬಹುರಾಷ್ಟ್ರೀಯ ಸಂಸ್ಥೆಗಳ ಜೊತೆಗಿನ ರಾಜನೀತಿಗೆ ಕಟ್ಟಾ ವಿರೋಧಿಯಾಗಿರುವ ಎಲ್ಲ ಸಂಘಟನೆಗಳು, ರಾಜಕೀಯ ಪಕ್ಷಗಳು, ಗುಂಪುಗಳು ಮತ್ತು ವ್ಯಕ್ತಿಗಳ ಜೊತೆ ಕಿಸಾನ್‌ಸಭೆಯು ಸೇರಿ ಕಾರ್ಯ ನಡೆಸಬೇಕು.

ವಿಶಾಲತಳಹದಿಯ ಐಕ್ಯತೆ:

ಎರಡನೆಯದಾಗಿ, ಮೊದಲಿನ ಆಡಳಿತ ಪಕ್ಷವಾಗಿದ್ದ ಕಾಂಗ್ರೆಸ್ ಮತ್ತು ಈಗಿನ ಆಡಳಿತ ಪಕ್ಷವಾದ ಜನತಾ ಎರಡೂ ಭಾರತವನ್ನು ಬಂಡವಾಳಶಾಹಿ ಬೆಳವಣಿಗೆಯ ದಾರಿಗೆ ಕೊಂಡೊಯ್ಯುವ ನೀತಿಗಳನ್ನು ಅನುಸರಿಸುತ್ತಿವೆ. ಅದೂ ಅಲ್ಲದೆ ಶತಮಾನಗಳಿಂದ್ಲ ಮುಂದುವರೆಯುತ್ತಿರುವ ಬಂಡವಾಳಶಾಹಿಪೂರ್ವ ಸಮಾಜವನ್ನು ನಾಶಮಾಡದೆ, ಬಂಡವಾಳಶಾಹಿಯು ಏಕಸ್ವಾಮ್ಯ ಬಂಡವಾಳಶಾಹಿಯಾಗಿ ಬೆಳೆಯಲು ಅವಕಾಶ ನೀಡುತ್ತಿದೆ. ಇದರ ಫಲವಾಗಿ, ಸ್ವಾತಂತ್ರ್ಯ ಬಂದು 31 ವರ್ಷಗಳು ಕಳೆದು, ಅದರ 28 ವರ್ಷಗಳನ್ನು ಯೋಜನಾಬದ್ಧ ಆರ್ಥಿಕ ಬೆಳವಣಿಗೆಯಲ್ಲಿ ಕಳೆದರೂ ಭಾರತದೇಶವು ಜಗತ್ತಿನ ಅತಿಬಡ ರಾಷ್ಟ್ರಗಳಲ್ಲಿ ಒಂದಾಗಿ ಉಳಿದಿದೆ. ಬಂಡವಾಳಶಾಹಿಗಳು, ಭೂಮಾಲೀಕರು ಮತ್ತು ಅವರ ಹಿಂಬಾಲಕರ ಸಣ್ಣ ಗುಂಪುಗಳು ಪ್ರಗತಿ ಹೊಂದುತ್ತಿದ್ದರೆ, ಜನಸಮುದಾಯವು ಅವರ್ಣನೀಯ ದಾರಿದ್ರ್ಯದಲ್ಲಿ ಮುಳುಗಿದೆ. ನಿರುದ್ಯೋಗ, ವೇತನ ಮತ್ತು ಜೀವನ ಮಟ್ಟಗಳ ಕುಸಿತ, ಗ್ರಾಹಕ ವಸ್ತುಗಳ ಏರುಬೆಲೆ ಜೊತೆಗೆ, ಸಣ್ಣ ಮತ್ತು ಮಧ್ಯಮ ಉತ್ಪಾದಕರು ಮಾರುಕಟ್ಟೆಗೆ ತಂದ ವಸ್ತುಗಳಿಗೆ ತುಂಬಾ ಕಡಿಮೆ ಬೆಲೆ, ತೆರಿಗೆ ಮತ್ತು ಸಾಲಗಳ ಹೆಚ್ಚುತ್ತಿರುವ ಹೊರೆ-ಇವೆಲ್ಲವೂ ಬಡವರ ಪಾಲಿಗೆ ಬಂದಿವೆ. ಗ್ರಾಮೀಣ ಮತ್ತು ನಗರಗಳಲ್ಲಿ ಸ್ವಲ್ಪ ಅನುಕೂಲಸ್ಥರಾಗಿರುವವರೂ ಕೂಡ ತಮ್ಮನ್ನು ದಿವಾಳಿಯೆಬ್ಬಿಸುವ ಅನೇಕ ಶಕ್ತಿಗಳಿಗೆ ಸಿಕ್ಕಿ, ಸಾಲ ಹೊತ್ತುಕೊಂಡು, ಕೆಲಸ ಸರಿಯಾಗಿಲ್ಲದೆ ಅಥವಾ ಕೆಲಸವೇ ಇಲ್ಲದಿರುವ ಸ್ಥಿತಿಗೆ ಇಳಿಯುವಂತಾಗಿದೆ. ಸಣ್ಣ ಸಂಖ್ಯೆಯ ದೊಡ್ಡ ಭೂಮಾಲೀಕರು, ದೊಡ್ಡ ವಾಣಿಜ್ಯದಾರರು ಮತ್ತು ಅವರ ಏಜೆಂಟರು ಮಾತ್ರ, ಈಗ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಲಾಭ ಪಡೆಯುತ್ತಿದ್ದಾರೆ.

ಮೂರನೆಯದಾಗಿ, ವಿವಿಧ ವರ್ಗ ಮತ್ತು ಶ್ರೇಣಿಗಳಿಗೆ ಸಂಬಂಧಿಸಿದಹಾಗೆ ಕೃಷಿರಂಗದಲ್ಲೂ ಸಾಕಷ್ಟು ಬದಲಾವಣೆಗಳು ಆಗಿವೆ. ಕಾಯಿದೆಬದ್ಧ ಭೂಮಾಲೀಕತ್ವವು ಹೆಚ್ಚುಕಡಿಮೆ ಮಾಯವಾಗಿದೆ. ಗ್ರಾಮೀಣ ಬಡವರು ಮತ್ತು ಮಧ್ಯಮವರ್ಗದವರಿಗೆ ಮತ್ತು ರೈತರು, ಭೂಹೀನ ಕೃಷಿಕಾರ್ಮಿಕರು, ಕುಶಲಕರ್ಮಿಗಳಿಗೆ ಪರಿಹಾರ ಮತ್ತು ವಿನಾಯಿತಿಗಳನ್ನು ನೀಡಲಾಗಿದೆ. ಇವೆಲ್ಲವೂ ಬಹುಸಂಖ್ಯಾತ ಗ್ರಾಮೀಣ ಜನತೆಯ ಪರಿಸ್ಥಿತಿಯನ್ನು ಸುಧಾರಿಸಿಲ್ಲ. (ಗೇಣಿ ಪದ್ಧತಿಯ ಸುಧಾರಣೆ, ಭೂಹಿಡುವಳಿಗೆ ಮಿತಿ ನಿರ್ದೇಶ, ಉತ್ಪಾದನೆಯ ತಾಂತ್ರಿಕ ಬದಲಾವಣೆಗಳಿಗೆ ಸಹಾಯ, ಸಾಲ ಸೌಲಭ್ಯ, ಸಹಕಾರಿ ಸಂಘಗಳ ರಚನೆ, ಪಂಚಾಯಿತಿ, ಬ್ಲಾಕುಗಳ ರಚನೆ ಮುಂತಾದ) ಎಲ್ಲ ಗ್ರಾಮೀಣ ಸುಧಾರಣೆಗಳಿಂದ ಆದ ಪರಿಣಾಮ ಎಂದರೆ, ಗ್ರಾಮೀಣ ಜನತೆಯು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಿಕ್ಕಿಕೊಂಡು, ಮಾರುಕಟ್ಟೆ ಕಾನೂನುಗಳ ಅಂಥ ಆಚರಣೆಗೆ ಬಲಿಯಾಗುತ್ತಿರುವುದು. ಗ್ರಾಮೀಣ ಪ್ರದೇಶಗಳನ್ನು ವಿತ್ತೀಕರಿಸುವ ಕೆಲಸವನ್ನು ಸರ್ಕಾರ ಇನ್ನೂ ಶೀಘ್ರಗೊಳಿಸುತ್ತಿರುವುದರಿಂದ, ಗ್ರಾಮೀಣ ಜನತೆ, ಬಂಡವಾಳಶಾಹಿ ಮಾರುಕಟ್ಟೆಗೆ ಮತ್ತೆ ಬಲಿಯಾಗುತ್ತಿದ್ದಾರೆ. ಹಳೆ ಪದ್ಧತಿಯ ಭೂಮಾಲೀಕರು ಮತ್ತು ಲೇವಾದೇವಿಗಾರರ ಕೈಯಿಂದ ಗ್ರಾಮೀಣ ಬಡಜನತೆ ಮತ್ತು ಮಧ್ಯಮವರ್ಗಗಳನ್ನು ಬಿಡಿಸಿದ್ದರಿಂದ ಅವರು ಹಣ ಮತ್ತು ಮಾರುಕಟ್ಟೆ ವ್ಯವಸ್ಥೆಯ ಯಜಮಾನರ ಕೈಗೆ ಸಿಕ್ಕಿಬಿದ್ದಿದ್ದಾರೆ. ಭೂಸುಧಾರಣಾ ಕಾಯಿದೆಗಳನ್ನು ಕಾರ್ಯಗತಗೊಳಿಸುವುದನ್ನು ನಿಯಂತ್ರಿಸುವ, ಸಮಾಜದ ಉನ್ನತವರ್ಗದ ಶ್ರೇಣಿಗೇ ಈ ಯಜಮಾನರೂ ಸೇರಿರುವುದರಿಂದ, ಗ್ರಾಮೀಣ ಸಮಾಜದ ಭೂಹೀನ ಮತ್ತು ಬಡಜನತೆಗೆ ಹಂಚಬೇಕಾಗಿರುವ ಹೆಚ್ಚುವರಿ ಭೂಮಿಯನ್ನೂ ಇವರೇ ಕಬಳಿಸಲು ಶಕ್ತರಾಗಿರುತ್ತಾರೆ. ಅಖಿಲ ಭಾರತ ಕಿಸಾನ್ ಸಭೆಯ ರಚನೆಯ ಕಾಲದಲ್ಲಿ ರೂಪಿಸಲಾದ ಕಾರ್ಯಕ್ರಮದ ಊಳಿಗಮಾನ್ಯ ವಿರೋಧಿ ಅಂಶಕ್ಕೆ ಈಗ ಈ ಗ್ರಾಮೀಣ ಯಜಮಾನರ ಶೋಷಣೆ ಮತ್ತು ದಬ್ಬಾಳಿಕೆಯ ಅಂಶಗಳನ್ನು ಸೇರಿಸಿ ಮಾರ್ಪಡಿಸಬೇಕಾಗಿದೆ.

ಅಧಿಕಾರಶಾಹಿ ವಿರೋಧಿ ಕರ್ತವ್ಯಗಳು:

ನಾಲ್ಕನೆಯದಾಗಿ, ಆಡಳಿತಕ್ಕೆ ಸ್ವಲ್ಪ ಸ್ಥಿರತೆಯನ್ನು ಕೊಡುವಹಾಗೆ ಕಂಡುಬಂದ ಆಡಳಿತವರ್ಗಗಳ ಐಕ್ಯತೆ ಮತ್ತು ಒಗ್ಗಟ್ಟು ಈಗ ಇಲ್ಲವಾಗಿದೆ. ಹಿಂದೊಮ್ಮೆ ತಿಳಿದುಕೊಂಡಹಾಗೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯುವುದರಿಂದ ಎರಡು ಪಕ್ಷಗಳ ಪದ್ಧತಿ ಬರುತ್ತದೆ ಎಂಬುದು ಈಗ ಸುಳ್ಳಾಗಿದೆ. ಕಾಂಗ್ರೆಸ್ ಮತ್ತು ಜನತಾ ಈ ಎರಡೂ ಬೂರ್ಜ್ವಾ-ಭೂಮಾಲೀಕ ಪಕ್ಷಗಳೂ ಕೂಡ ಜನತೆಗೆ ಒಂದು ಸ್ಥಿರ ಸರ್ಕಾರವನ್ನು ಒದಗಿಸುವುದರಲ್ಲಿ ವಿಫಲವಾಗಿವೆ. ಬೂರ್ಜ್ವಾ-ಭೂಮಾಲೀಕ ವರ್ಗಗಳು ಆಡಳಿತ ನಡೆಸುವ ರಾಜಕೀಯ ಪದ್ಧತಿಯಲ್ಲಿ ಅಸ್ಥಿರತೆಯೂ ಒಂದು ಭಾಗವಾಗಿಬಿಟ್ಟಿದೆ. ಬೂರ್ಜ್ವಾ-ಭೂಮಾಲೀಕ ವರ್ಗಗಳ ಯಾವುದಾದರೊಂದು ಪಕ್ಷವನ್ನು ಪರಂಪರಾಗತವಾಗಿ ಅನುಸರಿಸುತ್ತಿರುವ ಲಕ್ಷಾಂತರ ಜನತೆಗೆ ಈಗ ಭ್ರಮನಿರಸನವಾಗಿ ಅವರು ದೇಶದ ಸಮಸ್ಯೆಗಳಿಗೆ ಪರಿಹಾರ ತರುವ ಹೊಸ ದಾರಿಗಳನ್ನು ಹುಡುಕುತ್ತಿದ್ದಾರೆ. ಇದರಿಂದ ಜನತೆ ಮತ್ತು ಆಳುವ ವರ್ಗಗಳ ನಡುವೆ ಮತ್ತು ಆಳುವ ವರ್ಗಗಳಲ್ಲೇ ವಿವಿಧ ಗುಂಪುಗಳ ನಡುವೆ ತೀವ್ರ ಸಂಘರ್ಷ ಹುಟ್ಟುತ್ತದೆ. ಆದ್ದರಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ಆಳುವ ವರ್ಗಗಳ ಒಂದಲ್ಲ ಒಂದು ಗುಂಪು ಅಧಿಕಾರಶಾಹಿ ಕ್ರಮಗಳನ್ನು ಅನುಸರಿಸುತ್ತದೆ. ಸ್ವಾತಂತ್ರ್ಯಪೂರ್ವ ವರ್ಷಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಊಳಿಗಮಾನ್ಯ ವಿರೋಧಿ ರಾಷ್ಟ್ರೀಯ ರಂಗದ ಅಗತ್ಯ ಬಿದ್ದಹಾಗೆ ಈಗಲೂ ಸಾಮ್ರಾಜ್ಯಶಾಹಿ ವಿರೋಧಿ, ಊಳಿಗಮಾನ್ಯ ವಿರೋಧಿ, ಏಕಸ್ವಾಮ್ಯ ವಿರೋಧಿ, ಮತ್ತು ಅಧಿಕಾರಶಾಹಿ ವಿರೋಧಿ ಶಕ್ತಿಗಳ ಒಂದು ಹೊಸ ಐಕ್ಯರಂಗದ ರಚನೆಯು ತೀರ ಅಗತ್ಯವಾಗಿದೆ.

ಸಾಮಾಜಿಕ–ಸಾಂಸ್ಕೃತಿಕ ಪ್ರಗತಿ:

ಕೊನೆಯದಾಗಿ, ಸಾಮ್ರಾಜ್ಯಶಾಹಿ, ಊಳಿಗಮಾನ್ಯತೆ, ಏಕಸ್ವಾಮ್ಯ ಮತ್ತು ಅಧಿಕಾರಶಾಹಿಗಳಿಗೆ ವಿರೋಧಿಯಾದ ಈ ಹೊಸ ಐಕ್ಯರಂಗವು ಬರೇ ಆರ್ಥಿಕ ಮತ್ತು ರಾಜಕೀಯ ವಿಚಾರಗಳಿಗೆ ಮಾತ್ರ ಹೋರಾಡದೆ, ಸಾಮಾಜಿಕ-ಸಾಂಸ್ಕೃತಿಕ ರಂಗದಲ್ಲೂ ಕೆಲಸ ಮಾಡಬೇಕು. ಏಕೆಂದರೆ, ರಾಜಕೀಯ ಅಸ್ಥಿರತೆಯು ಹೆಚ್ಚುತ್ತಿರುವುದರ ಲಾಭ ಪಡೆದು, ಎಲ್ಲ ರೀತಿಯ ಪ್ರತಿಗಾಮಿ ಮತ್ತು ಧಾರ್ಮಿಕ ವಿಚಾರ ಶಕ್ತಿಗಳು ಕೆಲಸ ಮಾಡಲು ಆರಂಭಿಸಿವೆ. ಆಧುನಿಕ ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ಅವು ಗಂಭೀರ ಸವಾಲಾಗಿ ಬಂದಿವೆ. ಜಾತಿ ಅಸಮಾನತೆಗಳ ನಿರ್ಮೂಲ, ಧಾರ್ಮಿಕ ಮತ್ತು ಮೂಢನಂಬಿಕೆಯ ಆಚರಣೆಗಳ ನಾಶ, ನಗರ ಮತ್ತು ಗ್ರಾಮೀಣ ಪ್ರದೇಶಗಳ ಲಕ್ಷಾಂತರ ದುಡಿಯುವ ಜನತೆಯ ಕಲಾತ್ಮಕ ಮತ್ತು ಸೌಂದರ್ಯಾತ್ಮಕ ಪ್ರತಿಭೆಗಳ ಪ್ರಜ್ಞಾಪೂರ್ವಕ ಮತ್ತು ಯೋಜನಾಬದ್ಧ ಬೆಳವಣಿಗೆ, ಜನತೆಯ ತಿಳುವಳಿಕೆಯ ವೈಜ್ಞಾನಿಕ ಮತ್ತು ತಾಂತ್ರಿಕ ಮಟ್ಟದ ಏರಿಕೆ–ಇವೆಲ್ಲವೂ ಯಾವುದೇ ಎಡಪಂಥೀಯ ಪ್ರಜಾಸತ್ತಾತ್ಮಕ ಸಂಘಟನೆ, ಪಕ್ಷ, ಗುಂಪು ಅಥವಾ ವ್ಯಕ್ತಿಯು ಗಮನ ಹರಿಸಬೇಕಾದ ಗುರಿಗಳು. ಜಾತಿ ಮತ್ತು ಮತೀಯ ಸಿದ್ಧಾಂತಗಳು, ಹಿಂದು ಮತ್ತು ಹಿಂದು ಅಲ್ಲದ ಬಗ್ಗೆ ತತ್ವದ ಪುನಶ್ಚೇತನ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳ ಅತ್ಯಾಧುನಿಕ ತಿಳುವಳಿಕೆಗಳಿಂದ ಕಲಿಯಲು ನಿರಾಕರಣೆ–ಇವೆಲ್ಲವೂ ಭಾರತೀಯ ಜನತೆಯ ಅದರಲ್ಲೂ ಗ್ರಾಮೀಣ ಪ್ರದೇಶಗಳ ಹಿಂದುಳಿದ ಜನತೆಯ ಸರ್ವತೋಮುಖ ಪ್ರಗತಿಯ ಹಾದಿಯಲ್ಲಿರುವ ಅಡ್ಡಿತಡೆಗಳು. ಭೂಸುಧಾರಣೆ, ಇತರ ಆರ್ಥಿಕ ಬೇಡಿಕೆಗಳ ಪೂರೈಕೆ, ಪ್ರಜಾಪ್ರಭುತ್ವ ಇವುಗಳಿಗಾಗಿ ಮತ್ತು ಅಧಿಕಾರಶಾಹಿ ವಿರುದ್ಧವಾಗಿ ನಡೆಸುವ ಹೋರಾಟದಷ್ಟೇ ಮುಖ್ಯವಾಗಿ, ಈ ದೌರ್ಬಲ್ಯಗಳು ಮತ್ತು ಕೊರತೆಗಳ ನಿವಾರಣೆಗಾಗಿ ನಡೆಸುವ ಹೋರಾಟವನ್ನು ಕಿಸಾನ್‌ಸಭೆ ಮತ್ತಿತರ ಪ್ರಜಾಪ್ರಭುತ್ವವಾದಿ ಪಕ್ಷಗಳು ಮತ್ತು ಸಂಘಟನೆಗಳು ಕೈಗೆತ್ತಿಕೊಳ್ಳಬೇಕು.

●

ಬಿಹಾರದಲ್ಲಿ ಆದಿವಾಸಿಗಳ ಮೇಲೆ ಪೋಲೀಸರ ದಬ್ಬಾಳಿಕೆ

ಇತ್ತೀಚೆಗೆ ಬಿಹಾರ್ ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶಗಳ ಕೃಷಿಕಾರ್ಮಿಕರು, ಭೂಹೀನ ಬಡಜನರು ಬಡರೈತರು ತಮ್ಮ ಅನೇಕ ಬೇಡಿಕೆಗಳ ಈಡೇರಿಕೆಗಾಗಿ ಮತ್ತು ಶೋಷಣೆಯ ವಿರುದ್ಧವಾಗಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಆಶ್ರಯದಲ್ಲಿ ಸಂಘಟಿತರಾಗಿ ಹೋರಾಟ ನಡೆಸುತ್ತಿದ್ದಾರೆ. ಅವರ ಹೋರಾಟ ಹೆಚ್ಚಿದ ಹಾಗೆ, ಶ್ರೀಮಂತ ಭೂಮಾಲೀಕರು, ಕಂಟ್ರಾಕ್ಟರರು, ಉಚ್ಚಜಾತಿಯ ಶ್ರೀಮಂತರು ಮುಂತಾದ ಪಟ್ಟಭದ್ರರು ಜಾಗೃತರಾಗಿ ಪುಂಡರಿಂದ ಪೋಲೀಸರಿಂದ ಈ ಹೋರಾಟವನ್ನು ಹತ್ತಿಕ್ಕಲು ತೀವ್ರ ಪ್ರಯತ್ನ ನಡೆಸುತ್ತಿದ್ದರು. ಗ್ರಾಮೀಣ ಬಡಜನರಲ್ಲಿ ಬಹುಪಾಲು ಆದಿವಾಸಿಗಳು ಪರಿಶಿಷ್ಟ ಜಾತಿ ಮತ್ತು ಜನಾಂಗದವರಾಗಿದ್ದಾರೆ. ಕರ್ಪೂರಿ ಠಾಕೂರರ ಸರ್ಕಾರವು ಈ ದೌರ್ಜನ್ಯವನ್ನು ತಡೆಯಲಾರದೆ ನಿಷ್ಕ್ರಿಯವಾಗಿದೆ. ಈ ದಾರುಣ ಪರಿಸ್ಥಿತಿಯಲ್ಲಿ, ಬಿಹಾರ್‌ನ ಸಂತಾಲ್‌ಪರಗಣ ಜಿಲ್ಲೆಯ ಛಾತರ್‌ಗಾಮಾ ವಿಭಾಗದಲ್ಲಿ ಇದೇ ಮಾರ್ಚಿ 17 ರಂದು ಕೇಂದ್ರ ರಿಸರ್ವ್ ಪೋಲೀಸರು ಆದಿವಾಸಿಗಳ ವಸತಿಗಳಿಗೆ ನುಗ್ಗಿ ಗುಂಡಿನೇಟಿನಿಂದ ಬೆದರಿಸಿ, 15000 ಆದಿವಾಸಿಗಳು ತಮ್ಮ ಗುಡಿಸಲುಗಳನ್ನೂ ಗ್ರಾಮಗಳನ್ನೂ ಬಿಟ್ಟು ಪಲಾಯನ ಮಾಡುವಂತೆ ಮಾಡಿದರೆಂಬ ವಾರ್ತೆಯು ವರದಿಯಾಗಿದೆ.

ಪೋಲೀಸರ ಈ ದಬ್ಬಾಳಿಕೆಯಿಂದ ಛಾತರ್‌ಗಾಮಾ ವಿಭಾಗದ ಸುಮಾರು 30 ಹಳ್ಳಿಗಳಲ್ಲಿ ಈಗ ಯಾವೊಬ್ಬ ಆದಿವಾಸಿಯೂ ಕಂಡುಬರದೆ. ಎಲ್ಲರೂ ಸಮೀಪದ ಸುಂದರ್‌ಪಹಾಡಿ ಬೆಟ್ಟಗಾಡುಗಳಿಗೆ ಓಡಿಹೋಗಿ ಅಲ್ಲಿ ಉಪವಾಸ ನರಳುತ್ತಿದ್ದಾರೆಂದು ವರದಿ ಬಂದಿದೆ. ದೇಶದಾದ್ಯಂತ ಸಂಘಟಿತ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಅನ್ಯಾಯವನ್ನು ಪ್ರತಿಭಟಿಸಿ, ಬಡರೈತರಿಗೆ ರಕ್ಷಣೆ ನೀಡಬೇಕಾಗಿದೆ.

●

ಅನ್ಯಾಯಕ್ಕೆ ಆತ್ಮಾರ್ಪಣೆ

ದ. ಕ. ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಲ್ಲಿ ಶ್ರೀಮತಿ ವೇದವಲ್ಲಿ ಹರಳೆ ಎಂಬ ಅಧ್ಯಾಪಕಿಯೊಬ್ಬರು ತಾ. 4-4-79ರಂದು ಆತ್ಮಹತ್ಯೆಮಾಡಿಕೊಂಡಿದ್ದಾರೆ. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಯಲ್ಲಿ ಪ್ರಥಮ ಸಹಾಯಕ ಅಧ್ಯಾಪಕಿಯಾಗಿದ್ದ ಶ್ರೀಮತಿ ಹರಳೆಯವರ ಸೇವಾಹಿರಿತನದಿಂದ ಬಂದ ನ್ಯಾಯಬದ್ಧ ಹಕ್ಕನ್ನು ಕಡೆಗಣಿಸಿ, ಜಾತೀಯತೆ ಮತ್ತು ಪಕ್ಷಪಾತದಿಂದ ಅವರಿಗಿಂತ ಸೇವೆಯಲ್ಲಿ ಕಿರಿಯರಾದವರನ್ನು ಮುಖ್ಯೋಪಾಧ್ಯಾಯರನ್ನಾಗಿ ಮಾಡಲಾಗಿತ್ತು. ಇದನ್ನು ಪ್ರತಿಭಟಿಸಿದ ಶ್ರೀಮತಿ ಹರಳೆಯವರು ವಿದ್ಯಾ ಇಲಾಖೆಯಿಂದ ಅನುಕೂಲಕರ ತೀರ್ಪನ್ನು ಪಡೆದಿದ್ದರು. ಆದರೂ ಆಕೆಯನ್ನು ಶಾಲೆಗೆ ಸೇರಿಸಿಕೊಳ್ಳದೆ ಅವರ ಮತ್ತು ಅವರ ಪತಿ ಡಾ. ಹರಳೆಯವರ ಮೇಲೆ ಗೂಂಡಾದಾಳಿ ನಡೆಸಲಾಗಿತ್ತು. ಇವೆಲ್ಲದರಿಂದ ಜುಗುಪ್ಸೆಗೊಂಡ ಶ್ರೀಮತಿ ವೇದವಲ್ಲಿ ಈ ಆತ್ಮಾರ್ಪಣೆ ದಾರಿ ಹಿಡಿದರೆಂದು ಅವರು ಬರೆದಿಟ್ಟ ಹೇಳಿಕೆಯಿಂದ ತಿಳಿಯಲಾಯಿತೆಂದು ವದಂತಿಯಿದೆ.

●

ಮೇ ಒಂದರಂದು ಹೋಟೇಲ್ ಕಾರ್ಮಿಕರ ಹೋರಾಟಕ್ಕೆ ನಾಂದಿ

ಮಾರ್ಕ್ಸಿಸ್ಟ್ ಸ್ಟಡಿ ಸರ್ಕಲ್‌ನ ಆಶ್ರಯದಲ್ಲಿ ದಿನಾಂಕ 28-3-79 ರಂದು ದೇವಾಂಗಸಂಘದಲ್ಲಿ ಕಾಂ. ವಿ. ಜಿ. ಕೆ. ನಾಯರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಬೆಂಗಳೂರಿನ ಹೋಟೆಲ್ ಕಾರ್ಮಿಕರು ಚರಿತ್ರಾರ್ಹ ದಿನವಾದ ಮೇ 1ನೇ ತಾರೀಕನ್ನು ಬೇಡಿಕೆಯ ದಿನವನ್ನಾಗಿ ಆಚರಿಸಲು ನಿರ್ಧರಿಸಿದರು. 94 ವರ್ಷಗಳ ಹಿಂದೆ 1886ರ ಮೇ ತಿಂಗಳಲ್ಲಿ ಚಿಕಾಗೋ ನಗರದ ಸಹಸ್ರಾರು ಕಾರ್ಮಿಕರು 'ದಿನಕ್ಕೆ ಎಂಟು ಗಂಟೆ ಕೆಲಸ' ಎಂಬ ಬೇಡಿಕೆಯನ್ನಿಟ್ಟು ಹೋರಾಟ ನಡೆಸಿ ಯಶಸ್ವಿಯಾಗಿ ಚರಿತ್ರಾರ್ಹ ದಾಖಲೆಯನ್ನು ನಿರ್ಮಿಸಿದರೂ ಸಹ ಬೆಂಗಳೂರಿನ ಹೋಟೆಲ್ ಕಾರ್ಮಿಕರ ಪಾಲಿಗೆ 'ಎಂಟು ಗಂಟೆ ಕೆಲಸ' ಎಂಬುದು ಕನಸಿನ ಮಾತಾಗಿದೆ.

ಹೋಟೆಲ್ ಕಾರ್ಮಿಕರು ಹಗಲೂ ರಾತ್ರಿ ಅವಿಶ್ರಾಂತವಾಗಿ ದುಡಿದರೂ ಸಹ ಅವರಿಗೆ ಸಂವಿಧಾನಾತ್ಮಕವಾಗಿ ದೊರೆಯಬೇಕಾದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರಿಗೆ ಸಂಬಳ ಸಹಿತ ರಜಾ ಇಲ್ಲ, ಬೋನಸ್, ಗ್ರಾಚ್ಯುಟಿ, O. T. ಯಾವುದೂ ಗೊತ್ತಿಲ್ಲ. ಈ ಸೌಲಭ್ಯಗಳನ್ನು ಪಡೆಯಲು ಈ ಕಾರ್ಮಿಕರು ಸಂಘಟಿತರಾಗುವ ಸೂಚನೆ ಕಂಡು ಬಂದಲ್ಲಿ ಮಾಲೀಕರು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವ ಬೆದರಿಕೆಯೊಂದಿಗೆ ಗೂಂಡಾಗಿರಿಯನ್ನು ನಡೆಸುತ್ತಾರೆ. ಇದಕ್ಕೆಲ್ಲಾ ಪೋಲೀಸರೂ ಕಾರ್ಮಿಕ ಇಲಾಖೆ ಅಧಿಕಾರಿಗಳೂ ಮಾಲೀಕರಿಗೆ ಸಂಪೂರ್ಣ ಬೆಂಬಲ ನೀಡುವ ಮೂಲಕ ಸಂಘಟನೆಯನ್ನು ಮುರಿಯುತ್ತಾರೆ. ಈ ಹಿಂದೆ ಅನೇಕ ಬಾರಿ ಇದೇ ರೀತಿಯ ಅನುಭವಗಳಾಗಿದೆ ನಮ್ಮ ಹೋಟೆಲ್ ಕಾರ್ಮಿಕರಿಗೆ. ಆದರೆ ಈ ಸಾರಿ ನಮ್ಮ ಸಂಘಟನೆಯನ್ನು ಮುರಿಯಲು ಯಾರಿಗೂ ಅವಕಾಶ ನೀಡುವುದಿಲ್ಲ. ನಮ್ಮ ಸಂಘಟನೆಯನ್ನು ಉಳಿಸಿಕೊಳ್ಳಲು ನಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಡಲು ನಾವು ಯಾವ ತ್ಯಾಗವನ್ನಾದರೂ ಮಾಡಲು ಸಿದ್ಧರಿದ್ದೇವೆ ಎಂಬ ಆತ್ಮ ವಿಶ್ವಾಸವನ್ನು ಹೋಟೆಲ್ ಕಾರ್ಮಿಕರು ತೋರಿಸಿದ್ದಾರೆ. ●

ಸಿಂಧನೂರಿನಲ್ಲಿ ಬಹಿರಂಗ ಸಭೆ

ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ "ಪ್ರಜಾಸತ್ತಾತ್ಮಕ ಯುವಕರ ಫೆಡರೇಶನ್" (DYF)ಗೆ ಸೇರ್ಪಡೆಯಾಗಿರುವ "ಸಿಂಧನೂರು ಸ್ಟೈಪೆಂಡರಿ ಪದವೀಧರರ ಸಂಘ"ದ ಆಶ್ರಯದಲ್ಲಿ ತಾ. 3-4-79ರಂದು ಸಂಘದ ಹಲವಾರು ಬೇಡಿಕೆಗಳ ಬಗ್ಗೆ ಬಹಿರಂಗ ಸಭೆ ನಡೆಯಿತು. ಕಾಂ. ಪುರುಷೋತ್ತಮರವರು ಮುಖ್ಯ ಅತಿಥಿಯಾಗಿ ಬಂದಿದ್ದರು. ಹಾಲಿ ಇರುವ, ಸ್ಟೈಪೆಂಡರಿ ಯೋಜನೆಯನ್ನು ಮುಂದುವರಿಸುವುದು, ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಕಾತಿಗಳಲ್ಲಿ ಸ್ಟೈಪೆಂಡರಿ ಪದವೀಧರರಿಗೆ ಆದ್ಯತೆ ಕೊಡುವುದು, ಹಾಗೂ ಮೈಸೂರು ಪವರ್ ಕಾರ್ಪೋರೇಶನ್‌ನಲ್ಲಿ ರಾಯಚೂರು ಯುವಕ-ಯುವತಿಯರಿಗೆ ಆದ್ಯತೆ ನೀಡುವುದು ಮುಂತಾದ ಬೇಡಿಕೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಸಭೆಯ ಅಂಗವಾಗಿ ಮಧ್ಯಾಹ್ನ ಮೆರವಣಿಗೆಯನ್ನು ಸಹಾ ಏರ್ಪಡಿಸಲಾಗಿತ್ತು. ●

ರೈತರ ಸಭೆ

ತಾ. 14-4-79ರಂದು ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದ ರೈತರ ವಿಸ್ತೃತ ಸಭೆಯು ಕಾಂ ಕೆ. ಅನಂತರವರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯಲ್ಲಿ ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಅಬ್ರಹಂ ಕರ್ಕಡರವರು ಉಪಸ್ಥಿತರಿದ್ದು ಕರ್ನಾಟಕ ಪ್ರಾಂತ್ಯ ರೈತ ಸಮ್ಮೇಳನವನ್ನು ನಡೆಸುವರೆ ಪೂರ್ವ ತಯಾರಿಯಾಗಿ ಮಾಡಿರುವ ತೀರ್ಮಾನಗಳನ್ನು ವಿವರಿಸಿ ಸಮ್ಮೇಳನದ ಯಶಸ್ವಿಗಾಗಿ ಗ್ರಾಮದ ಎಲ್ಲಾ ರೈತ ಕಾರ್ಯಕರ್ತರು ದುಡಿಯಬೇಕೆಂದರು. ಹದಿನೈದು ಸದಸ್ಯರಿರುವ ಗ್ರಾಮ ಸಮಿತಿಯನ್ನು ಆರಿಸಿ ಈ ಸಮಿತಿಗೆ ಅಧ್ಯಕ್ಷರಾಗಿ ಕೆ. ಆನಂದ ಭಂಡಾರಿಯವರನ್ನು, ಕಾರ್ಯದರ್ಶಿಯಾಗಿ ಕೆ. ಅನಂತರವರನ್ನು ಸರ್ವಾನುಮತದಿಂದ ಆರಿಸಲಾಯಿತು.

ತಾ. 15-4-79 ರಂದು ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಕಂದಾವರ ಗ್ರಾಮದ ಸುತಾವರ ಪ್ರದೇಶದ ರೈತರ ಸಭೆಯು ಶ್ರೀ ರಾಮದೇವಾಡಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಕರ್ನಾಟಕ ಪ್ರಾಂತ್ಯ ರೈತ ಸಮ್ಮೇಳನವನ್ನು ನಡೆಸುವರೆ ಪೂರ್ವ ತಯಾರಿಯಾಗಿ ಮಾಡಿರುವ ತಿರ್ಮಾನವನ್ನು ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಅಬ್ರಹಂ ಕರ್ಕಡರು ವಿವರಿಸಿದ ನಂತರ ಸಮ್ಮೇಳನದ ನಿಧಿ ಸಂಗ್ರಹ ಮಾಡುವ ತೀರ್ಮಾನವನ್ನು ಮಾಡಿ 15 ಮಂದಿಯ ಗ್ರಾಮ ಸಮಿತಿಯನ್ನು ಆರಿಸಲಾಯಿತು. ಈ ಸಮಿತಿಗೆ ಶ್ರೀ ರಾಮದೇವಾಡಿಗರನ್ನು ಅಧ್ಯಕ್ಷರಾಗಿಯೂ ಶ್ರೀ ಕೊರಗ ಶೇರಿಗಾರರನ್ನು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆರಿಸಲಾಯಿತು. ○

ಕೃಷಿ ಕೂಲಿಕಾರರ ಸಭೆ

ತಾ. 17-4-79ರಂದು ಹಾನಗಲ್ ತಾಲ್ಲೂಕು ಕೃಷಿ ಕೂಲಿಕಾರರ ಸಂಘದ ಕಾರ್ಯಕಾರಿ ಸಮಿತಿ ಸಭೆ ಸೇರಿತ್ತು. ರೈತರಿಗೆ ಪುಕ್ಕಟೆಯಾಗಿ ಹಂಚುವ ಕಾನೂನು ರಚನೆಯಾಗಬೇಕು, ಸಣ್ಣ ರೈತರ ಎಲ್ಲಾ ಸಾಲಗಳನ್ನು ರದ್ದುಗೊಳಿಸಿ, ಕಡಿಮೆ ಬಡ್ಡಿದರದ ಸಾಲ ಒದಗಿಸಲು ಹಾಗೂ ಗ್ರಾಮಾಂತರ ಪ್ರದೇಶಗಳ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸರಕಾರವನ್ನು ಒತ್ತಾಯಿಸಲು, ಕಾಂ. ಹೋತನಹಳ್ಳಿ ಫಕೀರಪ್ಪನವರ ನೇತೃತ್ವದಲ್ಲಿ 35 ಜನರ ಕ್ರಿಯಾ ಸಮಿತಿಯನ್ನು ರಚಿಸಲಾಯಿತು. ಸಭೆಯ ತೀರ್ಮಾನಗಳನ್ನು ತಿಳಿಸಲು ಅದೇ ದಿನ ಸಂಜೆ ಬಹಿರಂಗ ಸಭೆಯನ್ನು ನಡೆಸಲಾಯಿತು. ಅಕ್ಕಿಆಲೂರಿನ ಕಾಂ. ಹೆಚ್. ಎ. ನಾಮಧಾರಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ಎಂ. ಎಸ್. ಧಾರೇಶ್ವರ್, ಹುಬ್ಬಳ್ಳಿಯ ಕಾಂ. ಸಿ. ಜಿ. ಪಾಟೀಲ್, ಎಸ್. ಎಮ್. ಕನ್ನಗೌಡರು ಹಾಗೂ ಆರ್. ಎಸ್. ಬ್ಯಾಬಿನ ಮಾತಾಡಿದರು. ಭುಟ್ಟೋ ಮರಣದಂಡನೆಯನ್ನು ಸಭೆಯಲ್ಲಿ ಖಂಡಿಸಲಾಯಿತು. ಕನ್ನಗೌಡರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ●

ಕೋಲಾರದಲ್ಲಿ ನೀರಿನ (ಅ) ವ್ಯವಸ್ಥೆ

ಕೋಲಾರ ನಗರದಲ್ಲಿ ಚಿಕ್ಕ ಚೆನ್ನಂಜಪ್ಪ ವಾಟರ್ ವರ್ಕ್ಸ್, ತೊಟ್ಟಿ ಬಾವಿ, ಮತ್ತು ಕೋಲಾರಮ್ಮ ವಾಟರ್ ವರ್ಕ್ಸ್ ಇದ್ದು ನಾಗರೀಕರಿಗೆ ಅಗತ್ಯವಾದಷ್ಟು ನೀರು ಸರಬರಾಜು ಆಗುತ್ತಿಲ್ಲ. ಕೋಲಾರ ನಗರದ ಪೌರ ಸಭೆಯೇ ಕಾರಣ. ಅನೇಕ ಕಡೆ ಅಂದರೆ ಕಠಾರಿಪಾಳ್ಯ ಮಾಲ್ದಾರಪೇಟೆ ಪೂಲ್‌ಚಾ ಮೊಹಲ್ಲ ಮುಂತಾದ ಬಡಾವಣೆಗಳಲ್ಲಿ ಪ್ರತಿ ಕುಟುಂಬಕ್ಕೆ ಕನಿಷ್ಠ 1 ಬಿಂದಿಗೆ ನೀರು ಸಹಿತ ದೊರೆಯುತ್ತಿಲ್ಲ. ಜನರು ಈ ರೀತಿ ಇರುವಾಗ ಕೆಲವು ಕೌನ್ಸಿಲರುಗಳು ಅವರ ಬೆಂಬಲಿಗರೂ ಮತ್ತು ಕೆಲವು ಶ್ರೀಮಂತರ ಮನೆಗಳಲ್ಲಿ ವಿದ್ಯುತ್ ಮೋಟಾರುಗಳಿಂದ ಅಲ್ಪ ಸ್ವಲ್ಪ ಬರುವ ನೀರನ್ನು ಸಹಿತ ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಂಡು ಅಕ್ಕಪಕ್ಕದವರಿಗೆ ತುಂಬಾ ತೊಂದರೆ ಉಂಟುಮಾಡುತ್ತಾರೆ. ಆದ್ದರಿಂದ ಬಡ ನಾಗರೀಕರು ಸುತ್ತ ಮುತ್ತಲಿನ ಬಾವಿಗಳಿಂದ (2KM)ಗಳಿಂದ ನೀರು ತೆಗೆದುಕೊಂಡು ಬಂದು ಉಪಯೋಗಿಸುತ್ತಾರೆ. ಪಕ್ಷಪಾತ ಸ್ಪರ್ಧೆಗಳನ್ನು ಬಿಟ್ಟು ನಾಗರೀಕರ ಸಮಸ್ಯೆಗಳ ಬಗ್ಗೆ ಗಮನ ಕೊಡಬೇಕೆಂದು ಅಧಿಕಾರಿಗಳನ್ನು ನಾಗರೀಕರು ಒತ್ತಾಯಿಸಿದ್ದಾರೆ. ○

ಕೋಲಾರ ರೈತರಿಂದ ಪಿಕೆಟಿಂಗ್

ಕೋಲಾರ ತಾಲ್ಲೂಕು ರೈತಸಂಘದ ನೇತೃತ್ವದಲ್ಲಿ ತಾ. 12-4-79 ರಂದು, ಒಸ್‌ದರ ಏರಿಕೆ, ನೀರು ಗಂದಾಯ ಬಾಕಿ, ಸೊಸೈಟಿ ಸಾಲದ ಬಾಕಿ ಹಾಗೂ ಇತರೆ ಸಾಲಗಳನ್ನು ರೈತರಿಂದ ಬಲಾತ್ಕಾರವಾಗಿ ವಸೂಲು ಮಾಡುತ್ತಿರುವುದನ್ನು ವಿರೋಧಿಸಿ ನೂರಕ್ಕೂ ಹೆಚ್ಚು ಮಂದಿ ಕಾಂ. ಆರ್. ವೆಂಕಟರಾಮಯ್ಯನವರ ನೇತೃತ್ವದಲ್ಲಿ ಬಸ್ಸುಗಳನ್ನು ಪಿಕೆಟಿಂಗ್ ಮಾಡಿದರು. ಪೋಲೀಸರು ಎಲ್ಲರನ್ನೂ ಬಂಧಿಸಿ, ಸಂಜೆ ಬಿಡುಗಡೆ ಮಾಡಿದರು. ಕಾಂ. ಹೆಚ್. ಅಬ್ದುಲ್ ಮಜೀದ್, ಆರ್, ವೆಂಕಟರಾಮಯ್ಯ, ಚಿಕ್ಕವೆಂಕಟಗಿರಿ, ವೆಂಕಟೇಶಪ್ಪ. ಹಾಗೂ ಮಹಮ್ಮದ್ ಖಾಸಿಂ ಮುಂತಾದವರು ಬಂಧಿತರಲ್ಲಿ ಸೇರಿದ್ದಾರೆ. ○

ರೈತ ಸಂಘವನ್ನು ಬಲಪಡಿಸಲು ಮನವಿ

ರಾಜ್ಯದ ರೈತರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾರ್ಗ ಹಿಡಿಯುವುದಲ್ಲದೆ ಬೇರೆ ದಾರಿ ಇಲ್ಲವೆಂತಲೂ ಮತ್ತು ಅರ್ಜಿ ಗುಜರಾಯಿಸಿ ಕಾಯುತ್ತಾ ಕುಳಿತುಕೊಳ್ಳುವ ಕಾಲ ಹೊರಟು ಹೋಯಿತೆಂದು ತುಮಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷ ಎಚ್. ಸಿ. ಚನ್ನಪ್ಪ ಅವರು ಹೇಳಿದ್ದಾರೆ. ತುಮಕೂರು ಜಿಲ್ಲೆಯ ಹರಳುಕಟ್ಟೆ ಗ್ರಾಮದಲ್ಲಿ ಸಾಂಸ್ಕೃತಿಕ ಸಮಾರಂಭವೊಂದರ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದ ಶ್ರೀಯುತರು ರೈತಸಂಘವನ್ನು ಬಲಪಡಿಸಿ ಅದರ ಮೂಲಕ ರೈತ ಜನತೆಯ ಎಲ್ಲಾ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸರ್ವರೂ ಪ್ರಯತ್ನಿಸಬೇಕೆಂದು ಮನವಿ ಮಾಡಿದರು. ○

ಪ್ಲಾಂಟೇಷನ್ ಕಾರ್ಮಿಕರಿಗೆ ಸಿ ಐ ಟಿ ಯು ಬೆಂಬಲ

ದ. ಕ. ಜಿಲ್ಲೆಯ ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ಸರ್ಕಾರದ ಅರಣ್ಯ ಇಲಾಖೆಯ ಒಡೆತನದಲ್ಲಿರುವ ಸುಮಾರು 10,000 ಎಕರೆ ರಬ್ಬರ್ ಪ್ಲಾಂಟೇಷನ್‌ನಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವ ಕಾರ್ಮಿಕರಿಗೆ ಪ್ಲಾಂಟೇಷನ್ ಆಕ್ಟ್ ಪ್ರಕಾರ ಯಾವುದೇ ಸೌಲಭ್ಯ ಸವಲತ್ತುಗಳು ಲಭ್ಯವಾಗದಿರುವುದರ ಬಗ್ಗೆ ಸಿ. ಐ. ಟಿ. ಯು. ರಾಜ್ಯ ಸಮಿತಿ ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ.

ಮೇ ಒಂದರಂದು 5000 ರಬ್ಬರ್ ತೋಟ ಕಾರ್ಮಿಕರು ಬೇಡಿಕೆಗಳನ್ನು ಈಡೇರಿಸುವ ಸಾಂಕೇತಿಕ ಮುಷ್ಕರಕ್ಕೆ ಸಿ. ಐ. ಟಿ. ಯು. ರಾಜ್ಯಸಮಿತಿಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿರುವುದೇ ಅಲ್ಲದೆ, ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದೆ. ●

ಶಿವಮೊಗ್ಗ ನಗರಸಭಾ ಚುನಾವಣೆಗೆ ಸ್ಪರ್ಧೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಶಿವಮೊಗ್ಗ ನಗರಸಭಾ ಚುನಾವಣೆಗೆ 7 ಸ್ಥಾನಗಳಿಗೆ ಸ್ಪರ್ಧಿಸುವುದಾಗಿ ತೀರ್ಮಾನಿಸಲಾಗಿದೆ. ಹಾಗೂ ಕಾಂಗ್ರೆಸನ್ನು ಸೋಲಿಸಲು ಜನತಾ ಪಕ್ಷ ಮತ್ತು ಇತರ ಪಕ್ಷಗಳೊಂದಿಗೆ ಹೊಂದಾಣಿಕೆಗೆ ಪ್ರಯತ್ನಿಸಲೂ ತೀರ್ಮಾನಿಸಲಾಗಿದೆ. ○

ರೈತರ ಕಳವಳ

(3ನೇ ಪುಟದಿಂದ)

ಪೂರೈಕೆಯಲ್ಲಿ ಆಗಿರುವ ತೊಂದರೆಯನ್ನು ವಿವರಿಸಲು ಹಾಗೂ ಕೂಡಲೇ ರೈತ-ಕಾರ್ಮಿಕರ ಕಷ್ಟ ಪರಿಹರಿಸಲು ಒತ್ತಾಯ ತರಲು ಕಾಂ. ಪಾಪಣ್ಣನವರ ನೇತೃತ್ವದಲ್ಲಿ ನಿಯೋಗವೊಂದು ಸ್ಥಳೀಯ ಅಸಿಸ್ಟೆಂಟ್ ಎಂಜಿನೀಯರ್ ಹಾಗೂ ಚಿಕ್ಕಬಳ್ಳಾಪುರದ ಎಕ್ಸಿಕ್ಯೂಟೀವ್ ಎಂಜಿನೀಯರ್‌ರವರನ್ನು ಭೇಟಿ ಮಾಡಿತು. ಅಧಿಕಾರಿಗಳೂ ಕೂಡಲೇ ಸೂಕ್ತಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ್ದಾರೆ. ○

ಉಪವಾಸ ಸತ್ಯಾಗ್ರಹ

ಕೋಲಾರ ಜಿಲ್ಲಾ, ಶಿಡ್ಲಘಟ್ಟದಲ್ಲಿ ದುರ್ಬಲ ವರ್ಗದವರಿಗೆ ಸ್ವಂತ ಮನೆ ಕಟ್ಟಿಕೊಳ್ಳಲು ಸೈಟುಗಳನ್ನು ಹಂಚಿಕೆ ಮಾಡುವುದರಲ್ಲಿ ಆಡಳಿತಾಧಿಕಾರಿಗಳ ವಿಳಂಬವನ್ನು ಪ್ರತಿಭಟಿಸಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಟೌನ್ ಕಮಿಟಿ ತಾ. 23-4-79ರಿಂದ 24 ಗಂಟೆಗಳ ಸರದಿ ಉಪವಾಸ ಮುಷ್ಕರ ಪ್ರಾರಂಭಿಸಲು ತೀರ್ಮಾನಿಸಿದ್ದಾರೆ. ಸಾರ್ವಜನಿಕರ ಬೆಂಬಲ ಕೋರಲಾಗಿದೆ.

ಗುಡಿಸಲು ವಾಸಿಗಳಿಗೆ ಸಿ ಐ ಟಿ ಯು ಬೆಂಬಲ

ಅತ್ಯಂತ ದುರ್ಬಲ ಮತ್ತು ಅಸಹಾಯಕರಾದ ಬನಶಂಕರಿಯ ಗುಡಿಸಲು ನಿವಾಸಿಗಳ ಮೇಲೆ ಅಮಾನವೀಯ ದಬ್ಬಾಳಿಕೆ ನಡೆಸಿರುವ ಪೋಲೀಸ್ ಮತ್ತು ಸರ್ಕಾರದ ವರ್ತನೆಯನ್ನು ಸಿ. ಐ. ಟಿ. ಯು. ರಾಜ್ಯಸಮಿತಿ ಖಂಡಿಸಿದೆ.

ಪ್ರಸ್ತುತ ನಿರಾಶ್ರಿತರಾಗಿರುವ ಈ ಬಡಜನತೆಗೆ ಸರ್ಕಾರ ಕೂಡಲೆ ಪುನರ್ವಸತಿಗಾಗಿ ಸ್ಥಳ ನೀಡುವುದೇ ಅಲ್ಲದೆ, ಅವರು ಕಳೆದುಕೊಂಡಿರುವ ಅಲ್ಪಸ್ವಲ್ಪ ಆಸ್ತಿಯನ್ನು ಕಟ್ಟಿಕೊಡಬೇಕೆಂದು ರಾಜ್ಯಸಮಿತಿಯು ಸರ್ಕಾರವನ್ನು ಒತ್ತಾಯಿಸಿದೆ. ●

REG. KRNB-368 MAG (2) PRB DECR 319/78-79

ಮೇ ದಿನದ ಪ್ರಣಾಳಿಕೆ

(1ನೇ ಪುಟದಿಂದ)

ಕೊಂಡೆವು. ಈ ಪರಿಸ್ಥಿತಿ ಮತ್ತೆ ಬರಲು ನಾವು ಬಿಡಬಾರದು. ಸರ್ವಾಧಿಕಾರಿ ಶಕ್ತಿಗಳು ಮತ್ತೆ ಚೇತರಿಸಿಕೊಳ್ಳದಂತೆ ನಾವು ತಡೆಯಬೇಕು.

ಇಂದು ಶ್ರಮಿಕವರ್ಗದ ಮೇಲೆ ಅವ್ಯಾಹತವಾಗಿ ಧಾಳಿ ನಡೆದಿದೆ. ಸಂಬಳ ಹೆಚ್ಚಾಗುತ್ತಿಲ್ಲ, ಆದರೆ ದಿನಬಳಕೆಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ದಿನದಿನವೂ ನಿರುದ್ಯೋಗ, ಕೆಲಸದಿಂದ ಕಿತ್ತುಹಾಕುವುದು, ಬೀಗಮುದ್ರೆಹಾಕುವುದು, ವಜಾಮಾಡುವುದು ಹೆಚ್ಚಾಗುತ್ತಿದೆ. ಏಕಸ್ವಾಮ್ಯದಲ್ಲಿರುವವರ ಐಶ್ವರ್ಯ ಹೆಚ್ಚಾಗುತ್ತಾ ಹೋಗುತ್ತಿರುವುದರ ಜೊತೆಗೆ ಶ್ರಮಿಕವರ್ಗದ ಬಡತನವೂ ಹೆಚ್ಚಾಗುತ್ತಿದೆ. ಜನತಾಪಕ್ಷದ ಕಾರ್ಯನೀತಿಗಳು ಸರ್ವಾಧಿಕಾರಿಶಕ್ತಿಗಳಿಗೆ ಬಲಗೊಳ್ಳುವ ಅವಕಾಶಮಾಡಿಕೊಡುತ್ತಿವೆ. ಚುನಾವಣೆಯ ಸಮಯದಲ್ಲಿ ನೀಡಿದ ವಚನಗಳನ್ನೆಲ್ಲ ಜನತಾಪಕ್ಷ ಧಿಕ್ಕರಿಸಿದೆ. ಅಷ್ಟಲ್ಲದೆ, ಶ್ರಮಿಕವರ್ಗಕ್ಕೆ ಯಾವ ಆರ್ಥಿಕ ಪರಿಹಾರವನ್ನೂ ನೀಡಿಲ್ಲ. ಆದರೆ ತೆರಿಗೆಯ ಹೊರೆಯನ್ನು ಅವರ ಮೇಲೆ ಹೊರಿಸಿದೆ. ಕಾಂಗ್ರೆಸ್ ಆಡಳಿತದ ಕಾಲದಲ್ಲಿ ನಡೆಯುತ್ತಿದ್ದಂತೆ ಈಗಲೂ ಸಹ ಏಕಸ್ವಾಮ್ಯಗಳು, ಪಟ್ಟಭದ್ರ ಹಿತಾಸಕ್ತಿಗಳಿಗೆ ಸಹಕಾರ ಹಾಗೂ ಆಶ್ರಯ ಸಿಗುತ್ತಿದೆ. ಬಡತನ ಮತ್ತು ನಿರುದ್ಯೋಗಗಳು ಹೆಚ್ಚಾಗುತ್ತಿವೆ. ಈ ಸರಕಾರವು ಶ್ರಮಿಕವರ್ಗ ಮತ್ತು ಕಾರ್ಮಿಕ ಚಳುವಳಿಗಳನ್ನು ಹತ್ತಿಕ್ಕುತ್ತಿದೆ. ಮಿನಿಮೀಸಾವನ್ನು ಜಾರಿಗೆ ತಂದಿದೆ. ಮುಂಜಾಗ್ರತಾ ಬಂಧನದ ಕಾನೂನನ್ನು ಮತ್ತೆ ಜಾರಿಗೆ ತಂದಿದೆ. ನಾವು ಆಸ್ತಿಯ ಹಕ್ಕು ರದ್ದಾಗಬೇಕೆಂದು ಕೇಳುತ್ತಿರುವಾಗ ತುರ್ತುಪರಿಸ್ಥಿತಿಯಕಾಲದಲ್ಲಿ ಸರ್ವಾಧಿಕಾರಿಗಳು ಸಂವಿಧಾನತಿದ್ದುಪಡಿಯಿಂದ ಕಿತ್ತುಕೊಂಡ ಹಕ್ಕುಗಳನ್ನು ಇನ್ನೂ ಒದಗಿಸಿಲ್ಲ. ಬೋನಸ್ ನೀಡಿಕೆ ಮಸೂದೆಯನ್ನು ತಿದ್ದುಪಡಿಮಾಡಿ ರೈಲ್ವೆ ಕೆಲಸಗಾರರಿಗೆ, ಅಂಚೆ ಮತ್ತು ತಂತಿ ಕೆಲಸಗಾರರಿಗೆ, ಸರಕಾರಿ ವಿಭಾಗಗಳ ಕೆಲಸಗಾರರಿಗೆ, ವಿದ್ಯಾಸಂಸ್ಥೆಗಳಿಗೆ ಮತ್ತಿತರರಿಗೆ ಕನಿಷ್ಠ ಬೋನಸ್ ನೀಡಿಕೆಯನ್ನು ಇನ್ನೂ ನಿಗದಿಮಾಡಿಲ್ಲ.

ಜನತಾಪಕ್ಷದ ಸರ್ಕಾರವು ನೇಮಿಸಿದ್ದ ಭೂತಲಿಂಗಂ ಆಯೋಗವು ವೇತನ ಸ್ಥಗಿತತೆಯ ಬಗ್ಗೆ ಮಾಡಿದ ಶಿಫಾರಸ್ಸುಗಳನ್ನು ಸರ್ಕಾರ ಉಪಯೋಗಿಸುತ್ತಿದೆ. ಇದು ಸರಕಾರಿ ಉದ್ಯಮಗಳ ಬ್ಯೂರೋದಿಂದ ಕಾರ್ಯಗತವಾಗುತ್ತಿದೆ. ಕಾರ್ಮಿಕಸಂಘಟನೆಯ ಮೂಲ ಹಕ್ಕನ್ನು ಮತ್ತು ಮುಷ್ಕರದ ಹಕ್ಕನ್ನು ಕಸಿದುಕೊಳ್ಳುವ ಕೈಗಾರಿಕಾ ಬಾಂಧವ್ಯ ಮಸೂದೆಯನ್ನು ಜಾರಿಮಾಡಲಾಯಿತು. ಕಾರ್ಮಿಕರು, ಕೆಲಸಗಾರರು, ಶಿಕ್ಷಕರು, ದಾದಿಯರು ಮತ್ತು ಇತರ ಆಸ್ಪತ್ರೆಯ ಕೆಲಸಗಾರರು, ವಿದ್ಯಾಸಂಸ್ಥೆಯಲ್ಲಿ ದುಡಿಯುವವರು ಎಲ್ಲರ ಮೇಲೂ ಧಾಳಿ ಮಾಡಲಾಗುತ್ತಿದೆ. ಈ ನಿಟ್ಟಿನ ಬೆಳವಣಿಗೆಯು, ಸರ್ವಾಧಿಕಾರಿಶಕ್ತಿಗಳು ಜನರನ್ನು ಗಲಿಬಿಲಿ ಮಾಡಿ, ಪರಿಸ್ಥಿತಿಯ ಉಪಯೋಗವನ್ನು ತಾವು ಪಡೆದುಕೊಳ್ಳುವಂತೆ ಮಾಡುತ್ತಿದೆ.

ಈ ಮೇಲೆ ಹೇಳಿದ ವಿಚಾರಗಳಿಂದ, ಎಲ್ಲಾ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡಿ ಶ್ರಮಿಕವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಮತ್ತು ಜನತಾಪಕ್ಷದ ಜನವಿರೋಧಿ ಹಾಗೂ ಶ್ರಮಿಕವರ್ಗ ವಿರೋಧಿ ಮಸೂದೆಗಳನ್ನು ಧಿಕ್ಕರಿಸುವ ಜರೂರಿನ ಕ್ರಮ ಕೈಗೊಳ್ಳಬೇಕಾಗಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕಾಗಿ ಸಿ. ಐ. ಟಿ. ಯು. ಎಲ್ಲಾ ಕಾರ್ಮಿಕ ಸಂಘಟನೆಗಳಿಗೂ ಕರೆನೀಡುತ್ತದೆ ಮತ್ತು ಈ ಕೆಳಗಿನ ಬೇಡಿಕೆಗಳನ್ನು ಮುಂಡಿಸುತ್ತದೆ:

1. ಪ್ರಜಾಪ್ರಭುತ್ವವನ್ನು ಕಾಪಾಡಿ ಮತ್ತು ಸರ್ವಾಧಿಕಾರಿಶಕ್ತಿಗಳನ್ನು ದಮನಗೊಳಿಸಿ.

2. ಗ್ರಾಮೀಣ ಹಾಗೂ ನಗರ ಪ್ರದೇಶದ ಎಲ್ಲಾ ನಿರುದ್ಯೋಗಿಗಳಿಗೂ ಉದ್ಯೋಗ ಕೊಡಿ ಅಥವಾ ನಿರುದ್ಯೋಗ ಭತ್ಯೆನೀಡಿ. 'ಉದ್ಯೋಗದ ಹಕ್ಕ'ನ್ನು ಭಾರತದ ಸಂವಿಧಾನದಲ್ಲಿ ಸೇರಿಸಿ,

3. ಕೈಗಾರಿಕಾ ಬಾಂಧವ್ಯ ಮಸೂದೆ ಹಾಗೂ ಆಸ್ಪತ್ರೆ ಮತ್ತು ವಿದ್ಯಾಸಂಸ್ಥೆಗಳ ಮಸೂದೆಯನ್ನು ಹಿಂತೆಗೆದುಕೊಳ್ಳಿ. ಕಾರ್ಮಿಕರ ಹಕ್ಕುಗಳನ್ನು ಮತ್ತು ಸಂಘಟನೆಯನ್ನು ತಡೆಯುವ ಎಲ್ಲಾ ದಮನಕಾರಿ ನೀತಿಯನ್ನು ಹಿಂತೆಗೆದುಕೊಳ್ಳಿ.

4. ವೇತನ ಸ್ಥಗಿತತೆಯ ನೀತಿ ರದ್ದಾಗಲಿ, ಅವಶ್ಯಕತೆಯನ್ನು ಆಧರಿಸಿದ ಕನಿಷ್ಠ ವೇತನ ಜಾರಿಗೆ ಬರಲಿ.

5. ಬಳಕೆದಾರ ಬೆಲೆಸೂಚ್ಯಂಕದಲ್ಲಿನ ಮೋಸವನ್ನು ಸರಿಪಡಿಸಬೇಕು. ತುಟ್ಟಿ ಭತ್ಯೆಯನ್ನು ಶೇಕಡಾ ನೂರು ನ್ಯೂಟ್ರಲೈಸ್ ಮಾಡಬೇಕು.

6. ಭೂಸುಧಾರಣೆ ಜಾರಿಗೆ ಬರಲಿ, ಜಮೀನ್ದಾರಿಪದ್ಧತಿ ಮತ್ತು ಪಾಳೆಯಗಾರಿ ಶೋಷಣೆಗಳು ರದ್ದಾಗಲಿ. ಭೂಹೀನರಿಗೆ ಮತ್ತು ಬಡ ರೈತರಿಗೆ ಪರಿಹಾರ ಸಿಗಲಿ, ರೈತರ ಉತ್ಪತ್ತಿಗೆ ಸರಿಯಾದ ಬೆಲೆಗಳು ಸಿಗಲಿ.

7. ಬೀಗಮುದ್ರೆ, ಲೇ ಆಫ್, ರಿಟ್ರೆಂಚ್‌ಮೆಂಟ್‌ಗಳು ರದ್ದಾಗಲಿ. ಮುಚ್ಚಿರುವ ಎಲ್ಲಾ ಫ್ಯಾಕ್ಟರಿಗಳು, ಮಿಲ್ಲುಗಳು, ಚಹಾತೋಟಗಳು, ಗಣಿಗಳು ಪುನಃ ಕಾರ್ಯಾರಂಭ ಮಾಡಬೇಕು.

8. ಎಲ್ಲರಿಗೂ ಬೋನಸ್ ಮತ್ತು ಕಾರ್ಮಿಕಸಂಘಗಳ ಬೇಡಿಕೆಯಂತೆ ಬೋನಸ್ ನೀಡಿಕೆ ಮಸೂದೆಯ ತಿದ್ದುಪಡಿಯಾಗಲಿ.

9. ಎಲ್ಲಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಸಮಾನತೆ ಮತ್ತು ಹಕ್ಕುಗಳ ರಕ್ಷಣೆ ಸಿಗಬೇಕು.

10. ತೆರಿಗೆಯ ಹೊರೆ ಕಡಿಮೆಯಾಗಲಿ ಮತ್ತು ಅವಶ್ಯಕವಸ್ತುಗಳು ಕಡಿಮೆ ಬೆಲೆಗೆ ಸಿಗುವಂತಾಗಬೇಕು.

ಈ ಬೇಡಿಕೆಗಳೊಂದಿಗೆ ನಮ್ಮಲ್ಲಿ ಬೆಳೆಯುವ ಐಕ್ಯತೆ, ಬೆಳೆಯುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವವಾದಿಶಕ್ತಿಗಳಿಗೆ ಮೂಲ ಸೆಲೆಯಾಗಲಿ. ಈ ಒಗ್ಗೂಡಿದ ಶಕ್ತಿ, ಸರ್ವಾಧಿಕಾರದ ಅಪಾಯವನ್ನು, ಏಕಸ್ವಾಮ್ಯ, ಮಾಲೀಕರು ಮತ್ತು ಜಮೀನ್ದಾರರನ್ನು ಮತ್ತು ಅವರ ಜನವಿರೋಧಿ ನೀತಿಗಳನ್ನು ಸೋಲಿಸಬೇಕು.

ವಿನೋಬಾಭಾವೆಯವರ ಆಮರಣಾಂತ ಉಪವಾಸದ ಕುರಿತು ಸಿ. ಪಿ. ಐ. (ಎಂ) ಪೋಲಿಟ್ ಬ್ಯೂರೋ

ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಗೋವಧೆಗೆ ಸಂಪೂರ್ಣ ನಿಷೇಧಹಾಕಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಶ್ರೀ ವಿನೋಬಾ ಭಾವೆಯವರನ್ನು ಉಪವಾಸ ಕುಳಿತುಕೊಳ್ಳದಂತೆ ಮನಒಲಿಸಲು ಎಲ್ಲಾ ಪಕ್ಷಗಳು, ಸಂಘಟನೆಗಳು ಹಾಗೂ ವ್ಯಕ್ತಿಗಳು ಮಾಡಿದ ಪ್ರಯತ್ನ ವಿಫಲವಾದುದಕ್ಕೆ ಸಿ.ಪಿ.ಐ. (ಎಂ) ಪಕ್ಷದ ಪೋಲಿಟ್‌ಬ್ಯೂರೋ ತೀವ್ರ ವಿಷಾದ ಪಡುತ್ತದೆ.

ವಿನೋಬಾಜಿಯವರ ಉಪವಾಸ ನಿಸ್ಸಂಶಯವಾಗಿ ಇಂದಿರಾ ಕಾಂಗ್ರೆಸ್ ಮತ್ತು ಆರೆಸ್ಸೆಸ್‌ಗಳು ಹಿಂದೂ ಜಾತೀಯವಾದವನ್ನು ಹರಡಲು ಹಾಗೂ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ವಿರುದ್ಧ ಜಾತೀಯ ಗಲಭೆಗಳನ್ನು ಮಾಡಿ ಲಾಭಗಳಿಸಲು ಸಹಾಯಕವಾಗಿದೆ.........

ಮತೀಯ ಭಾವನೆಗಳನ್ನು ಉದ್ರೇಕಿಸುವ ಗೋಹತ್ಯೆಯಂಥ ವಿಷಯದ ಬಗ್ಗೆ ಉಪವಾಸ ಮಾಡುವುದರ ಮೂಲಕ ತಮ್ಮ ಪ್ರಾಣವನ್ನು ಅಪಾಯಕ್ಕೆ ಒಡ್ಡುವುದರ ಬದಲು ವಿನೋಬಾಜಿಯವರು ಈ ದೇಶದ ಕೋಟ್ಯಾಂತರ ಜನತೆಯನ್ನು ಬಾಧಿಸುತ್ತಿರುವ ಬಡತನ, ನಿರುದ್ಯೋಗ, ಹರಿಜನರ ಮೇಲಿನ ನಿತ್ಯ ಹಲ್ಲೆಗಳು ಹಾಗೂ ಜಾತೀಯ ಗಲಭೆಗಳ ವಿರುದ್ಧ ಉಪವಾಸ ಮಾಡಿ ಎಲ್ಲರ ಗಮನವನ್ನು ಸೆಳೆಯಬಹುದಾಗಿತ್ತು. ಆದರೆ ವಿನೋಬಾಜಿಯವರು ಜನತೆಯ ಗಮನವನ್ನು ದೇಶದ ಗಂಭೀರ ಸಮಸ್ಯೆಗಳಿಂದ ವಿಮುಖಗೊಳಿಸಲು ಯತ್ನಿಸುತ್ತಿದ್ದಾರೆ. ಜನತೆಯನ್ನು ಒಡೆದು, ಜಾತೀಯವಾದಿ ವೈರಿಗಳನ್ನು ಸೃಷ್ಟಿಸಲು ಪ್ರತಿಗಾಮಿಗಳಿಗೆ ಸುವರ್ಣಾವಕಾಶವನ್ನು ಒದಗಿಸುತ್ತಿದ್ದಾರೆ......

ತುರ್ತುಪರಿಸ್ಥಿತಿಯಲ್ಲಿ ಸಹಸ್ರಾರು ಜನತೆಯ ಹತ್ಯೆಯಾದಾಗ ಮೌನವಾಗಿದ್ದ ವಿನೋಬಾ ಆಗ ಇಂಥಹ ಸಾಹಸಕ್ಕೆ ಇಳಿಯಲು ಸಿದ್ಧರಿರಲಿಲ್ಲ.

ಎಲ್ಲರೂ ವಿನೋಬಾಜಿಯವರಿಗೆ ಹೇಳಿ, ಒತ್ತಾಯ ತಂದು, ಉಪವಾಸ ಮಾಡದಂತೆ ಮಾಡಬೇಕೆಂದು ಪಿ. ಬಿ. ಎಲ್ಲರನ್ನು ಕಳಕಳಿಯಿಂದ ವಿನಂತಿಸುತ್ತದೆ.

ಪ್ರಾಂತ ರೈತ ಸಂಘ ಸಮ್ಮೇಳನ

ದಿನಾಂಕ 12, 13, 14 ಮೇ 1979 ಮಂಗಳೂರಿನಲ್ಲಿ, 12ರಂದು ಬೆಳಿಗ್ಗೆ 11ಗಂಟೆಗೆ ಉದ್ಘಾಟನೆ. 14ರಂದು ಸಂಜೆ ಮೆರವಣಿಗೆ, ಬಹಿರಂಗಸಭೆ. ಪ್ರತಿ 100 ಸದಸ್ಯರಿಗೆ ಒಬ್ಬ ಪ್ರತಿನಿಧಿ; ಪ್ರತಿಜಿಲ್ಲೆಯು 5 ವೀಕ್ಷಕರನ್ನು ಕಳುಹಿಸಬಹುದು. ಜಿಲ್ಲೆಯಾದ್ಯಂತ ಪ್ರಚಾರ, ಪ್ರಕ್ಷೋಭೆ ನಡೆಸಬೇಕು.

ಸಮ್ಮೇಳನಕ್ಕೆ ಬರುವಾಗ ಸದಸ್ಯತ್ವದ ಪುಸ್ತಕಗಳು, ಸದಸ್ಯತ್ವದ ವಿವರ, ಬಾಕಿ ಇರುವ ಸದಸ್ಯತ್ವದ ಹಣವನ್ನು ತೆಗೆದುಕೊಂಡು ಬರಬೇಕು. ಹೀಗೆ ಮಾಡಿಲ್ಲವಾದರೆ ಪ್ರತಿನಿಧಿಗಳಾಗುವುದು ಸಾಧ್ಯವಿಲ್ಲ. ಪ್ರತಿನಿಧಿಗಳು ಮತ್ತು ವೀಕ್ಷಕರು 11ರ ರಾತ್ರಿ ಅಥವಾ 12 ರಂದು ಬೆಳಿಗ್ಗೆ ಮಂಗಳೂರನ್ನು ತಲುಪಬೇಕು. 11ರ ಸಂಜೆಯಿಂದ 12ರ ಮಧ್ಯಾಹ್ನ ತನಕ ಹಂಪನಕಟ್ಟೆ ಬಸ್ ನಿಲ್ದಾಣದಲ್ಲಿ ಸ್ವಾಗತ ಸಮಿತಿಯ ಸ್ವಯಂ ಸೇವಕರು ಇರುವರು. ಸಮ್ಮೇಳನ ನಡೆಯುವ ಸ್ಥಳ: ಕಾಂ. ಕೃಷ್ಣಶೆಟ್ಟಿ ನಗರ.

(ದ. ಕ. ಜಿಲ್ಲಾ ಹಂಚಿನ ಕಾರ್ಮಿಕರ ಸಂಘದ ವರದಿ)

ಬೋಳಾರ, ಮಂಗಳೂರು.

ಸಂಪಾದಕೀಯ

(1ನೇ ಪುಟದಿಂದ)

ರಾಜ್ಯಸರಕಾರದ ಯೋಜನೆಗಳಲ್ಲಿ ಬಹಳಷ್ಟು ಸರಿಯಾಗಿ ಕಾರ್ಯಗತವಾಗಿಲ್ಲ ಎಂಬುದು ಸ್ಪಷ್ಟವಾಗುವುದು. ಕಾರ್ಯಗತವಾದ ಕೆಲವು ಯೋಜನೆಗಳು ತೋರ್ಪಡಿಕೆಗಾಗಿ ಮಾತ್ರವೇ ಇವೆ. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಗಳು ಎಲ್ಲೆಲ್ಲೂ ತಾಂಡವವಾಡುತ್ತಿವೆ. ಸರಕಾರದ ಜನತಾ ವಸತಿ ಯೋಜನೆಯಲ್ಲಿ ಬಹಳಷ್ಟು ಮೋಸ ನಡೆದು ಕೆಲವೆಡೆ ಮನೆಗೆ ವಕ್ಕಲಾಗುವ ಮೊದಲೇ ಮನೆಗಳು ಮುರಿದು ಬಿದ್ದಿವೆ. ಮಧ್ಯವರ್ತಿಗಳು, ಕಂಟ್ರಾಕ್ಟುದಾರರು ಮತ್ತು ರಾಜಕೀಯ ಪುಡಾರಿಗಳು ತುಂಬಾ ಲಾಭಪಡೆದಿದ್ದಾರೆ.

ಯಾವ ಯೋಜನೆಗಳು ಕಾರ್ಯಗತವಾಗಬೇಕಾದರೆ ಜನತೆಯು ಪಾಲ್ಗೊಳ್ಳುವಂತಾಗಬೇಕು. ಯೋಜನೆಗಳು ಮತ್ತು ಅವಶ್ಯಕತೆಗಳಿಗೆ ಹೊಂದಾಣಿಕೆ ಬೇಕು. ಯೋಜನೆಗಳ ಪ್ರಯೋಜನಕ್ಕಾಗಿ ಮತ್ತು ಸರಕಾರದ ದುಂದುವೆಚ್ಚ, ಮೋಸಕ್ಕೆದಿರಾಗಿ ಬಡಜನತೆಯು ಹೋರಾಡಬೇಕು.

ಪರಿಸರ

ವಿನೋಬಾಭಾವೆಯವರಿಗೆ ತಾಕತ್ತಿದ್ದರೆ, ಪೌನಾರ್ ಆಶ್ರಮದಲ್ಲಿ ಕುಳಿತು ರಾಜಕೀಯ ಮಾಡುವುದನ್ನು ಬಿಟ್ಟು ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ ಹೋಗಿ ಅಲ್ಲಿಯ ಜನರನ್ನು 'ಗೋಹತ್ಯೆ ನಿಷೇಧ' ಕಾನೂನಿನ ಪರವಾಗಿ ಸಂಘಟಿಸಲಿ. ಆ ರಾಜ್ಯಗಳ ಜನತೆಯು ಆಯಾ ರಾಜ್ಯ ಸರಕಾರಗಳ ಮೇಲೆ 'ಗೋಹತ್ಯೆ ನಿಷೇಧ' ಕಾನೂನು ತರುವಂತೆ ಒತ್ತಾಯ ಮಾಡಿಸುವುದರಲ್ಲಿ ಭಾವೆಯವರು ತೊಡಗಲಿ.

—"ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ವಾಚಕರೊಬ್ಬರ ಪತ್ರ.

ಬೆಂಗಳೂರಿನ ಮೈಕೋ ಕಾರ್ಖಾನೆಯ ಮುಖ್ಯ ಆಡಳಿತಾಧಿಕಾರಿಯ ವಾರ್ಷಿಕ ವರಮಾನ 5 ಲಕ್ಷ 50 ಸಾವಿರ ರೂಪಾಯಿಗಳು. ಆದರೆ ಅದೇ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕನೊಬ್ಬನ ವಾರ್ಷಿಕ ವರಮಾನ 6 ಸಾವಿರ ರೂಪಾಯಿಗಳು. ವರಮಾನದ ಅಂತರವನ್ನು 10:1ಕ್ಕೆ ತರುತ್ತೇವೆಂದು ಜನತೆಗೆ ವಚನ ಕೊಟ್ಟಿರುವ ಜನತಾಪಕ್ಷದ ನೀತಿಗಳು ಕಾರ್ಯರೂಪದಲ್ಲಿ ಹೇಗಿವೆ ನೋಡಿ......

—ಪತ್ರಿಕಾ ಸಂದರ್ಶನವೊಂದರಲ್ಲಿ ಕರ್ನಾಟಕದ

ಸಿ. ಐ. ಟಿ. ಯು. ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್

ಪ್ರಪಂಚದಲ್ಲಿ ಕಿರಿಯ ವಯಸ್ಸಿನ ಮಕ್ಕಳು ದುಡಿಮೆಯಲ್ಲಿ ತೊಡಗಿರುವುದು ಭಾರತದಲ್ಲೇ ಅತಿ ಹೆಚ್ಚು.

—"ಇಂಟರ್‌ನ್ಯಾಶನಲ್ಲಿ ಲೇಬರ್ ಆರ್ಗನೈಸೇಷನ್" ವರದಿಯೊಂದರಿಂದ

ದಿನನಿತ್ಯ ಬಳಕೆಯ ಪದಾರ್ಥಗಳ ಬೆಲೆ ಏರಿಕೆಗೆ ಕೇಂದ್ರ ಸರಕಾರವೇ ಸಂಪೂರ್ಣ ಹೊಣೆ

—ಜ್ಯೋತಿಬಸು.

ಆಂತರಿಕ ಭದ್ರತಾ ಶಾಸನವನ್ನು (MISA) ಸಂಪೂರ್ಣವಾಗಿ ತೆಗೆದುಹಾಕುತ್ತೇವೆಂದು ದೇಶಕ್ಕೆ ವಚನವಿತ್ತ ಜನತಾ ನಾಯಕರು ಅದನ್ನು ಸಂಪೂರ್ಣವಾಗಿ ತೊಡೆದು ಹಾಕದೆ ಜನತೆಗೆ ದ್ರೋಹವೆಸಗಿದ್ದಾರೆ.

ಎಂ. ಸಿ. ಛಾಗ್ಲ

ಶ್ರೇಷ್ಠನ್ಯಾಯಾಲಯದ ಮಾಜಿ ನ್ಯಾಯಮೂರ್ತಿಗಳು.

ಅವರು (ಸಿ. ಪಿ. ಐ.) ಯಾವಾಗಲೂ ಆರ್. ಎಸ್. ಎಸ್. ವಿರುದ್ಧ ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಲೇ ಇರುತ್ತಾರೆ. ರಾಷ್ಟ್ರಾದ್ಯಂತ ಈ ವಿಷಯದಲ್ಲಿ ಅವರದು ಒಂದೇ ನಿಲುವು. ಕೇರಳದಲ್ಲಿ ಅವರ ಸರ್ಕಾರ ಆರ್. ಎಸ್. ಎಸ್. ನ್ನು ನಿರ್ಭಂದಿಸಿರುವುದಂತೆ.

ಆದರೆ, ಆಶ್ಚರ್ಯಕರ ಸಂಗತಿಯೆಂದರೆ, ಘರ್ಷಣೆ ನಡೆಯುತ್ತಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟರಿಗೂ ಆರ್. ಎಸ್. ಎಸ್. ನಡುವೆ.

—ಓರ್ವ ಚಿಂತಕ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-54, K. V. Temple Street, Sultanpet, Bangalore-560 053.